بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْكَرِيْمِ وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 03

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 36

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

08 ಸೆಪ್ಟೆಂಬರ್ 2022, 08 ತಬೂಕ್ 1401 ಹಿಜರಿ ಶಮ್‌ಸಿ,
12 ಸಫರ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

قَالَ مُوْسٰى لِقَوْمِهِ اسْتَعِيْنُوْا بِاللّٰهِ وَاصْبِرُوْا ۚ اِنَّ الْاَرْضَ لِلّٰهِ ۙ يُوْرِثُهَا مَنْ يَّشَآءُ مِنْ عِبَادِهٖ ۗ وَالْعَاقِبَةُ لِلْمُتَّقِيْنَ ○ (اعراف:129)

**(ಅಲ್ ಅಅ್‌ರಾಫ್ : 129)**

ಅಂದರೆ: ಮೂಸಾ ತನ್ನ ಜನರೊಡನೆ ಹೇಳಿದರು: 'ನೀವು ಅಲ್ಲಾಹನ ಸಹಾಯವನ್ನು ಯಾಚಿಸಿರಿ ಮತ್ತು ಸಹನೆಯನ್ನು ಕೈಗೊಳ್ಳಿರಿ. ಖಂಡಿತವಾಗಿಯೂ ಭೂಮಿ ಅಲ್ಲಾಹನದ್ದಾಗಿದೆ. ಅವನ ದಾಸರ ಪೈಕಿ ತಾನು ಇಷ್ಟಪಡುವವರಿಗೆ ಅವನು ಅದನ್ನು ವಾರಸು ಹಕ್ಕಾಗಿ ನೀಡುತ್ತಾನೆ. ಅಂತಿಮ ವಿಜಯ ಭಯಭಕ್ತಿಯನ್ನು ಕೈಗೊಳ್ಳುವವರಿಗೆ.'

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಬಡ್ಡಿಯ ಖಂಡನೆ ಮತ್ತು ಅದರ ಶಿಕ್ಷೆ

(2085) ಹಝ್ರತ್ ಸಮ್ರ ಬಿನ್ ಜುಂದಬ್(ರ) ವರದಿ ಮಾಡುತ್ತಾರೆ: ಪ್ರವಾದಿ(ಸ) ಹೇಳಿದರು: ಇಂದು ರಾತ್ರಿ ಇಬ್ಬರು ವ್ಯಕ್ತಿಗಳು ನನ್ನ ಬಳಿಗೆ ಬಂದು ನನ್ನನ್ನು ಪವಿತ್ರ ಭೂಮಿಗೆ ಕರೆದೊಯ್ದಿರುವುದನ್ನು ನಾನು ಕನಸಿನಲ್ಲಿ ನೋಡಿದೆ. ನಾವು ರಕ್ತದ ನದಿಯ ಬಳಿಗೆ ಬರುವವರೆಗೂ ನಡೆದೆವು, ಅದರ ದಡದಲ್ಲಿ ಒಬ್ಬ ವ್ಯಕ್ತಿಯು ನಿಂತಿದ್ದನು ಅವನ ಮುಂದೆ ಕಲ್ಲುಗಳು ಹಾಕಿದ್ದವು ಮತ್ತು ನದಿಯ ಮಧ್ಯದಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದನು. ಆಗ ನದಿಯಲ್ಲಿ ನಿಂತಿದ್ದವನು ಮುಂದೆ ಹೋಗಿ ಹೊರಬರಲು ಮುಂದಾದಾಗ ಮತ್ತೊಬ್ಬ (ದಡದಲ್ಲಿ ನಿಂತಿದ್ದ) ಅವನ ಮುಖಕ್ಕೆ ಕಲ್ಲು ಎಸೆದು ಅವನು ನಿಂತಿದ್ದ ಜಾಗಕ್ಕೆ ಪುನಃ ಕಳುಹಿಸಿದನು. ಅದೇ ರೀತಿ ಆ ವ್ಯಕ್ತಿಯು ಹೊರಬರಲು ಪ್ರಯತ್ನಿಸಿದಾಗ ಅವನು ಅವನ ಮುಖದ ಮೇಲೆ ಕಲ್ಲು ಎಸೆಯುತ್ತಾನೆ, ಅದರಿಂದ ಅವನು ಅದೇ ರೀತಿಯಲ್ಲಿ ಹಿಂದಿರುಗುತ್ತಾನೆ. ನಾನು ಹೇಳಿದೆ: ಇದು ಏನು? ಅದಕ್ಕೆ ಪ್ರವಾದಿ(ಸ) ಹೇಳಿದರು: ನೀವು ನದಿಯಲ್ಲಿ ನೋಡಿದ ವ್ಯಕ್ತಿ ಬಡ್ಡಿದಾರನಾಗಿದ್ದಾನೆ.

### ಪ್ರವಾದಿಯವರು ಕುಂಬಳಕಾಯಿಯನ್ನು ಇಷ್ಟಪಡುತ್ತಾರೆ ಮತ್ತು ಹಝ್ರತ್ ಅನಸ್(ರ) ಅವರ ಕುಂಬಳಕಾಯಿಯ ಮೇಲಿನ ಪ್ರೀತಿ

(2092) ಹಝ್ರತ್ ಅನಸ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಅವರು ಹೇಳುತ್ತಿದ್ದರು: ಒಬ್ಬ ಟೈಲರ್ ಪೈಗಂಬರ್(ಸ) ಅವರನ್ನು ಊಟಕ್ಕಾಗಿ ಆಹ್ವಾನಿಸಿದನು. ನಾನು ಸಹ ಈ ಆಹ್ವಾನಕ್ಕೆ ಪೈಗಂಬರ್(ಸ) ಅವರೊಂದಿಗೆ ಹೋಗಿದ್ದೆ ಎಂದು ಹಝ್ರತ್ ಅನಸ್ ಬಿನ್ ಮಲಿಕ್(ರ) ಹೇಳುತ್ತಿದ್ದರು. ಅವರು ಪೈಗಂಬರ್(ಸ)ರವರ ಮುಂದೆ ರೊಟ್ಟಿ ಮತ್ತು ಕುಂಬಳಕಾಯಿ ಮತ್ತು ಮಾಂಸದ ಸಾರನ್ನು ನೀಡಿದರು. ನಾನು ಪೈಗಂಬರ್(ಸ) ಅವರನ್ನು ಕುಂಬಳಕಾಯಿ ಇದ್ದಂತಹ ಬಟ್ಟಲಿನಿಂದ ಕುಂಬಳಕಾಯಿಯನ್ನು ತಿನ್ನುತ್ತಿದ್ದನ್ನು ನೋಡಿದೆ ಆ ದಿನದಿಂದ ನಾನು ಕುಂಬಳಕಾಯಿಯನ್ನು ಇಷ್ಟಪಡುತ್ತೇನೆ.ನ **(ಬುಖಾರಿ, ಸಂಪುಟ-4, ಕಿತಾಬ್ ಅಲ್-ಬುಯು, 2008 ರಲ್ಲಿ ಪ್ರಕಟಿತ, ಖಾದಿಯಾನ್)**

**ಪವಿತ್ರ ಖುರ್‌ಆನ್ ಅನ್ನು ಉತ್ತಮ ರೀತಿಯಲ್ಲಿ ಮತ್ತು ಆಸಕ್ತಿಯಿಂದ ಓದುವುದು ಒಳ್ಳೆಯದು, ಆದರೆ ಪವಿತ್ರ ಖುರ್‌ಆನ್ ಪಠಣದ ಮುಖ್ಯ ಉದ್ದೇಶವೆಂದರೆ ಅದರ ಸತ್ಯಾಂಶಗಳನ್ನು ಮತ್ತು ಜ್ಞಾನಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು ಮತ್ತು ತನ್ನಲ್ಲಿ ಬದಲಾವಣೆಯನ್ನು ಮಾಡಿಕೊಳ್ಳುವುದಾಗಿದೆ**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಪವಿತ್ರ ಖುರ್‌ಆನ್‌ನ ಮುಖ್ಯ ಉದ್ದೇಶ ಮತ್ತು ಗುರಿಯು ಜಗತ್ತಿಗೆ ಧರ್ಮನಿಷ್ಠೆಯನ್ನು ಕಲಿಸುವುದಾಗಿದೆ, ಅದರ ಮೂಲಕ ಅವರು ಮಾರ್ಗದರ್ಶನದ ಗುರಿಯನ್ನು ಸಾಧಿಸಬಹುದಾಗಿದೆ. ಈಗ ಈ ಆಯತ್‌ನಲ್ಲಿ ಧರ್ಮನಿಷ್ಠೆಯ ಮೂರು ಹಂತಗಳನ್ನು ವಿವರಿಸಲಾಗಿದೆ. **ಅಲ್ಲಝೀನ ಯುಮಿನೂನ ಬಿಲ್‌ಗೈಬಿ ವ ಯುಖೀಮುನಸ್ಸಲಾತ ವ ಮಿಮ್ಮಾ ರಝುಖ್ನಾಹುಮ್ ಯುನ್‌ಫಿಖೂನ್** (ಅಲ್‌ಬಖರ: 04) ಜನರು ಪವಿತ್ರ ಖುರ್‌ಆನ್ ಅನ್ನು ಓದುತ್ತಾರೆ, ಆದರೆ ಅವರು ಗಿಳಿಯಂತೆ ಏನನ್ನು ತಿಳಿಯದೆ ಯೋಚಿಸದೆ ಓದುತ್ತಾರೆ. ಓರ್ವ ಪಂಡಿತನು ತನ್ನ ಪುಸ್ತಕವನ್ನು ಏನನ್ನು ಅರ್ಥ ಮಾಡಿಕೊಳ್ಳದೆ ಓದುತ್ತಾ ಹೋದಹಾಗೆ. ಆತನು ಸ್ವತಃ ಏನನ್ನೂ ಅರ್ಥಮಾಡಿಕೊಳ್ಳದಿದ್ದರೆ ಕೇಳುಗರಿಗೆ ಹೇಗೆ ತಿಳಿಯುವುದು? ಅದೇ ರೀತಿಯಲ್ಲಿ ಪವಿತ್ರ ಖುರ್‌ಆನ್ ಎರಡು ಅಥವಾ ನಾಲ್ಕು ಭಾಗಗಳನ್ನು ಪಠಿಸಿ ಏನು ಪಠಿಸಿದ್ದಾರೆ ಎಂದು ತಿಳಿಯದಿದ್ದರೆ, ಹಾಗೂ ಅದಕ್ಕಿಂತ ಹೆಚ್ಚಾಗಿ ಅದನ್ನು ಅದರ ಉಚ್ಚಾರ ಸ್ವರದಿಂದ 'ಖಾಫ್' ಮತ್ತು 'ಐನ್' ಅನ್ನು ಸಂಪೂರ್ಣವಾಗಿ ಉಚ್ಚರಿಸಲಾಗುತ್ತದೆ. ಪವಿತ್ರ ಖುರ್‌ಆನ್ ಅನ್ನು ಉತ್ತಮವಾಗಿ ಮತ್ತು ಆಸಕ್ತಿಯಿಂದ ಓದುವುದು ಒಳ್ಳೆಯದು, ಆದರೆ ಪವಿತ್ರ ಖುರ್‌ಆನ್ ಅನ್ನು ಪಠಿಸುವ ಮುಖ್ಯ ಉದ್ದೇಶವೆಂದರೆ ಅದರ ಸತ್ಯಗಳು ಮತ್ತು ಬೋಧನೆಗಳ ಬಗ್ಗೆ ಮಾಹಿತಿಯನ್ನು ಪಡೆಯುವುದು ಮತ್ತು ಒಬ್ಬ ವ್ಯಕ್ತಿಯು ತನ್ನಲ್ಲಿ ಬದಲಾವಣೆಯನ್ನು ಹೊಂದುವುದಾಗಿದೆ.

**(ಮಲ್‌ಫೂಝಾತ್, ಸಂಪುಟ-1, ಪುಟ-387, ಪ್ರಕಟಿತ ಖಾದಿಯಾನ್ 2018)**

**ಎಲ್ಲಾ ಮಾನವ ಆತ್ಮಗಳು, ಅವರ ದೇಹಗಳು ಜಗತ್ತಿನಲ್ಲಿ ವಾಸಿಸುತ್ತಿದ್ದವೇ ಎಂಬುದನ್ನು ಲೆಕ್ಕಿಸದೆ, ಒಟ್ಟುಗೂಡಿಸಲಾಗುತ್ತದೆ ಮತ್ತು ಪ್ರತಿಯೊಂದು ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರು ತನ್ನ ಜನಾಂಗದ ಬಗ್ಗೆ ಸಾಕ್ಷಿ ಹೇಳುತ್ತಾರೆ. ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಎಬ್ಬಿಸಲಾಗುವುದು ಎಂದು ಅವರು ಹೇಳಿದರು**

**ನನ್ನ ಪ್ರಕಾರ, ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆ, ಅವರು ತಮ್ಮ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಾ ಅಲ್-ನಹ್ಲ್ ಆಯತ್ 85 **ವಯೌಮ ನಬ್‌ಅಸು ಮಿನ್ ಕುಲ್ಲಿ ಉಮ್ಮತಿನ್ ಶಹೀದನ್ ಸುಮ್ಮ ಲಾ ಯುಅ್‌ಝನು ಲಿಲ್ಲಝೀನ ಕಫರೂ ವಲಾಹುಮ್ ಯುಸ್‌ತಅ್‌ತಬೂನ** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

**ತಫ್ಸೀರ್:** ಈ ದೊಡ್ಡ ಅಪರಾಧವನ್ನು ಪ್ರಸ್ತಾಪಿಸಿದ ನಂತರ, ಅವರು ಮರಣಾನಂತರದ ಜೀವನವನ್ನು ಉಲ್ಲೇಖಿಸಿದರು, ಈ ಜಗತ್ತಿನಲ್ಲಿ ಈ ಅಪರಾಧಕ್ಕಾಗಿ ಶಿಕ್ಷೆಗೆ ಒಳಗಾಗುತ್ತೀರಿ, ಆದರೆ ಪರಲೋಕದಲ್ಲಿಯೂ ಸಹ ನೀವು ಇನ್ನೂ ಹೆಚ್ಚಿನ ಶಿಕ್ಷೆಗೆ ಒಳಗಾಗುತ್ತೀರಿ ಮತ್ತು ಶಿಕ್ಷೆ ಮತ್ತು ಅವಮಾನವು ತುಂಬಾ ಕಠಿಣವಾಗಿರುತ್ತದೆ ಏಕೆಂದರೆ ಎಲ್ಲಾ ಮಾನವ ಆತ್ಮಗಳನ್ನು ಶಿಕ್ಷಿಸಲಾಗುತ್ತದೆ, ಅವರ ದೇಹಗಳು, ಅವರು ಯಾವುದೇ ಸಮಯದಲ್ಲಿ ಜಗತ್ತಿನಲ್ಲಿದ್ದರೆ, ಅವುಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಪ್ರತಿ ಜನಾಂಗದ ಪ್ರವಾದಿಯರನ್ನು ಮುಂದೆ ತರಲಾಗುತ್ತದೆ ಮತ್ತು ಅವರ ಜನಾಂಗದ ಬಗ್ಗೆ ಸಾಕ್ಷಿ ಹೇಳಲಾಗುತ್ತದೆ. ಹೀಗಿರುವಾಗ ಆ ಸಮಯದಲ್ಲಿ ತಮಗಾಗುವ ಅವಮಾನದ ಬಗ್ಗೆ ಇವರೇಕೆ ಯೋಚಿಸುವುದಿಲ್ಲ.

ಇನ್ನೊಂದು ಸ್ಥಳದಲ್ಲಿ, ಈ ಅವಮಾನವನ್ನು ಈ ಕೆಳಗಿನ ಪದಗಳಲ್ಲಿ ಉಲ್ಲೇಖಿಸಲಾಗಿದೆ **ಫಕೈಫ ಇಝಾ ಜಿಅ್‌ನ ಮಿನ್ ಕುಲ್ಲಿ ಉಮ್ಮತಿನ್ ಬಿಶಹೀದಿ ವ್ವಜಿಅ್‌ನಾ ಬಿಕ ಅಲಾ ಹಾಉಲಾಇ ಶಹೀದ.... ಯೌಮೀಝಿಯ್ಯುವದ್ದುಲ್ಲಝೀನ ಕಫರೂ ವ ಅಸಉರ್ರಸೂಲ ಲೌ ತುಸವ್ವಾ ಬಿಹಿಮುಲ್ ಅರ್ಝೂ**

*(ಪುಟ ಸಂಖ್ಯೆ-07 ರಲ್ಲಿ ಮುಂದುವರಿಸಲಾಗಿದೆ)*

لَا اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಒಬ್ಬ ಯಹೂದಿ ಹಝ್ರತ್ ಈಸಾ(ಅ) ರವರ ಭವಿಷ್ಯವಾಣಿಗಳ ಮೇಲೆ ಕಠಿಣವಾದ ಆರೋಪಗಳನ್ನು ಮಾಡಿದ್ದಾನೆ.**

**ಮೌಲ್ವಿ ಸನಾವುಲ್ಲಾಹ್, ಮುಹಮ್ಮದ್ ಹುಸೇನ್ ಅಥವಾ ಫಾದರಿ ಸಾಹೇಬರುಗಳಲ್ಲಿ ಯಾರಾದರೂ ಈ ಆರೋಪಗಳ ಉತ್ತರ ನೀಡಿದರೆ ಅವರಿಗೆ ನಾವು ಒಂದು ನೂರು ರೂಪಾಯಿಗಳ ನಗದು ಬಹುಮಾನ ನೀಡುವೆವು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ವೈಭವಯುತ ಬಹುಮಾನದ ಪಂಥಾಹ್ವಾನ ನಾವು ಅವರ ಗ್ರಂಥ "ಇಜಾಝ್ ಅಹ್ಮದಿ ಅನುಬಂಧ ನುಝೂಲುಲ್ ಮಸೀಹ್" ರೂಹಾನಿ ಖಝಾಯನ್ ಸಂಪುಟ 19 ರಿಂದ ಪ್ರಸ್ತುತಪಡಿಸುತ್ತಿದ್ದೇವೆ. ಎರಡು ದಿಗ್ಗಜರಾದ ಮೌಲ್ವಿ ಸನಾವುಲ್ಲಾಹ್ ಅಮೃತ್ಸರಿ ಮತ್ತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಈ ಮಧ್ಯೆ ಚರ್ಚೆ ಏರ್ಪಟ್ಟಾಗ ಮೌಲ್ವಿ ಸನಾವುಲ್ಲಾಹ್ ಅಮೃತ್ಸರಿ ಬಹಳಷ್ಟು ಸುಳ್ಳು ಮತ್ತು ವಂಚನೆಯಿಂದ ಸನಾವುಲ್ಲಾಹ್ ಅಮೃತ್ಸರಿ ಹೇಳಿದನು. ಹಝ್ರತ್ ಮಸೀಹ್ ಮೌಊದ್(ಅ) ರವರ ಯಾವ ಭವಿಷ್ಯವಾಣಿಯೂ ಸಹ ಪೂರ್ಣಗೊಂಡಿಲ್ಲ. ಇನ್ನೊಂದು ಸುಳ್ಳು ಹೇಳಿದ್ದೇನೆಂದರೆ ನಾನು ಮಿರ್ಝಾ ಸಾಹೇಬರೊಂದಿಗೆ ಮುಬಾಹಲ ಮಾಡಲು ಸಿದ್ಧನಿದ್ದೇನೆ. ಮೂರನೇ ಸುಳ್ಳು ಹೇಳಿದ್ದೇನೆಂದರೆ ನಾನು "ಇಜಾಝುಲ್ ಮಸೀಹ್" ನಂತಹ ಗ್ರಂಥ ಬರೆಯಬಲ್ಲೆನು ಇದೆಲ್ಲ ಸನಾವುಲ್ಲಾ ಅವರ ವಚಗಳಾಗಿದ್ದವು. ಅವರಿಗೆ ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ಮುಬಾಹಲ ಸ್ವೀಕರಿಸಲಿಲ್ಲ. ಅಲ್ಲದೇ ಇಜಾಝುಲ್ ಮಸೀಹ್‌ನಂತಹ ಗ್ರಂಥವು ಬರೆಯಲಿಲ್ಲ. ಅಷ್ಟೇ ಅಲ್ಲ ಅವರ ಇಡೀ ಜೀವನದಲ್ಲಿ ಅಂತಹ ಪುಸ್ತಕ ಬರೆಯಲಿಲ್ಲ. ಅಕಟಾಕಟ! ಅವರು ತಮ್ಮನ್ನು ಸಮುದಾಯದ ನೇತಾರರು ಎಂದು ಭಾವಿಸಿಕೊಳ್ಳುವರು ಎಂತಹ ನಾಚಿಕೆಗೇಡು ರೀತಿಯಲ್ಲಿ ಸುಳ್ಳು ಅರಗಿಸಿಕೊಳ್ಳುತ್ತಾರೆ ನಮ್ಮ ಯಾವುದೆ ಅಹ್ಮದಿ ಮಗುವಿನ ಬಾಯಿಂದ ಅರಿವಿಲ್ಲದೇ ಸುಳ್ಳು ಹೊರಟರೇ ಅವನು ಪಶ್ಚಾತ್ತಾಪ ಪಡುತ್ತಾನೆ. ಮತ್ತು ನಾಚಿಕೊಳ್ಳುತ್ತಾನೆ. ಆದರೆ ಈ ಮಹಾಪಂಡಿತರು ಕಿಂಚಿತ್ತೂ ನಾಚಿಕೆ ಪಡುವುದಿಲ್ಲ. ಏಕೆಂದರೆ ಅವರು ಆಕಾಶದ ಅಡಿಯಲ್ಲಿನ (ಅತ್ಯಂತ ನೀಚ) ಉಲಮಾಗಳಾಗಿದ್ದಾರೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಸನಾವುಲ್ಲಾಹ್ ಅವರ ಮುಬಾಹಲ ಮತ್ತು ಇಜಾಝುಲ್ ಮಸೀಹರ ಉತ್ತರವಾಗಿ ಬರೆದರು.

**ಸನಾವುಲ್ಲಾಹ್ ಪುರುಷರಾಗಿ ಮೈದಾನಕ್ಕೆ ಬಂದು ಹೋರಾಡಲಿ.**
**ನಾನು ಸೋತರೆ ನನ್ನ ಜಮಾಅತ್ ನನ್ನಿಂದ ಬೇಸರಪಟ್ಟು ದೂರವಾಗಲಿ.**

"ನಾನು ತಿಳಿಸಿದ್ದೇನೆ. ಅಲ್ಲದೇ ಮೌಲ್ವಿ ಸನಾವುಲ್ಲಾಹ್ ಅಮೃತ್ಸರಿ ಅವರ ಹಸ್ತಾಕ್ಷರದೊಂದಿಗಿನ ಬರಹ ನಾನು ಕಂಡಿದ್ದೇನೆ. ಅದರಲ್ಲಿ ಅವರು ಹೀಗೆ ಬೇಡಿಕೊಳ್ಳುತ್ತಾರೆ. ನಾನು ಈ ರೀತಿಯ ತೀರ್ಪಿನ ಬದಲು ಇಚ್ಛಿಸುವುದೇನೆಂದರೆ ಉಭಯೇತರರು ಅಂದರೆ ನಾನು ಮತ್ತು ಅವರು ಹೀಗೆ ಪ್ರಾರ್ಥಿಸೋಣ. ನಮ್ಮಿಬ್ಬರಲ್ಲಿ ಯಾವ ವ್ಯಕ್ತಿ ಸುಳ್ಳುಗಾರನೋ ಅವನು ಸತ್ಯವಂತನ ಜೀವನದಲ್ಲಿಯೇ ತೀರಿ ಹೋಗಬೇಕು. ಮತ್ತು ಹೀಗೂ ತನ್ನ ಇಚ್ಛೆ ವ್ಯಕ್ತಪಡಿಸಿದರು. ಅವರು ಇಜಾಝುಲ್ ಮಸೀಹ್ ರೀತಿಯಲ್ಲೇ ಪುಸ್ತಕ ರೀತಿಯಲ್ಲಿರುವುದು ಮತ್ತು ಅದೇ ಉದ್ದೇಶಗಳು ಒಳಗೊಂಡಿರುವುದು. ಹಾಗೆ ಮೌಲ್ವಿ ಸನಾವುಲ್ಲಾಹ್ ಸಾಹಿಬ್ ಅವರು ಈ ಅಭಿಲಾಷೆಗಳನ್ನು ಮನಃ ಪೂರ್ವಕವಾಗಿ ಕಪಟವಿಲ್ಲದೇ ಹೇಳುವುದಾದರೆ ಅದಕ್ಕಿಂತ ಉತ್ತಮ ಇನ್ನೇನಿದೆ. ಸಮುದಾಯದ ಅಧೋಗತಿಯ ಈ ಕಾಲದಲ್ಲಿ ಉಪಕಾರ ಮಾಡಿದಂತಾಗುವುದು, ಅವರು ಪುರುಷರಾಗಿ ಮೈದಾನಕ್ಕೆ ಬಂದು ಈ ಎರಡು ರೀತಿಯಿಂದ ಸತ್ಯ ಮತ್ತು ಮಿಥ್ಯದ ನಡುವೆ ತೀರ್ಪು ಪಡೆಯುವಂತಾಗಲಿ. ಅವರು ಒಂದು ಒಳ್ಳೆಯ ಸಲಹೆಯನ್ನು ತಿಳಿಸಿದ್ದಾರೆ. ಅದರ ಮೇಲೆ ಸ್ಥಿರವಾಗಿದ್ದರೆ ಲೇಸು. (ಇಜಾಝ್ ಅಹ್ಮದಿ ಝಮೀಮ ನುಝೂಲುಲ್ ಮಸೀಹ್, ರೂಹಾನಿ ಖಝಾಇನ್, ಸಂಪುಟ-19, ಪುಟ-121)

ಮತ್ತು ಅವರು ಬರೆದರು. 'ನಾನು ಸಾದರಪಡಿಸುವೆನು. ನಾನು ಒಂದು ವೇಳೆ ಈ ಸ್ಪರ್ಧೆಯಲ್ಲಿ ಸೋತು ಹೋದರೆ ನನ್ನ ಜಮಾಅತ್ (ಅವು ಒಂದು ಲಕ್ಷಕ್ಕಿಂತ ಸಂಖ್ಯೆಯಲ್ಲಿ ಹೆಚ್ಚಾಗಿದೆ) ಎಲ್ಲರೂ ನನ್ನಿಂದ ಬೇಸರಪಟ್ಟು ದೂರವಾಗಲಿ. ಏಕೆಂದರೆ ಅಲ್ಲಾಹನು ನನ್ನನ್ನು ಸುಳ್ಳುಗಾರನೆಂದು ಸಾಬಿತುಪಡಿಸಿ ಮರಣ ನೀಡಿದರೆ, ನಾನು ಸುಳ್ಳುಗಾರನಾಗಿ ಯಾವ ಮುಖಂಡತ್ವ ಮತ್ತು ಇಮಾಮರಾಗಲು ಇಷ್ಟಪಡುವುದಿಲ್ಲ. ಬದಲು ಅಂತಹ ಪರಿಸ್ಥಿತಿಯಲ್ಲಿ ಒಬ್ಬ ಯಹೂದಿಗಿಂತ ಕೀಳಾಗುವೆನು.

ಹಝ್ರತ್ ಮಸೀಹ್ ಮೌಊದ್(ಅ) ರವರ ಯಾವ ಭವಿಷ್ಯವಾಣಿಯು ಪೂರ್ಣಗೊಂಡಿಲ್ಲವೆಂಬ ಸನಾವುಲ್ಲಾಹ್ ಅವರ ಮಾತು ಅತ್ಯಂತ ಅಸಹನೀಯ ಸುಳ್ಳು ಮಾತಾಗಿದೆ. ಅಂತಹ ಮಾತು ಅಲ್ಲಾಹನ ಭಯವಿಲ್ಲದವನು ಹೇಳಬಹುದಾಗಿದೆ. ಅಂತ್ಯ ತೀರ್ಮಾನದ ದಿನದ ಮೇಲೆ ವಿಶ್ವಾಸವಿಲ್ಲದವನೇ ಅಂತಹ ಮಾತು ಹೇಳಬಹುದಾಗಿದೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರ ಪರವಾಗಿ ಅಲ್ಲಾಹನು ದೃಷ್ಟಾಂತಗಳ ಸುರಿಮಳೆ ಮಾಡುತ್ತಿದ್ದನು. ಅದನ್ನು ದ್ವೇಷದಿಂದ ಕಣ್ಣುಮುಚ್ಚಿಕೊಂಡವರಿಗೆ ಮಾತ್ರ ಕಾಣದಿರಲು ಸಾಧ್ಯ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

**ನನ್ನ ಪರವಾಗಿ ಅಲ್ಲಾಹನ ಪರಿಪಕ್ವವಾದ ಮತ್ತು ಪರಿಶುದ್ಧ ದೃಷ್ಟಾಂತಗಳು ಮಳೆಯ ರೂಪದಲ್ಲಿ ಸುರಿಯುತ್ತಿದೆ.**

"ಓ ನ್ಯಾಯವಂತರೇ, ನಮ್ಮ ಗ್ರಂಥ ನುಝೂಲುಲ್ ಮಸೀಹ್ ಓದುಗರೇ ಅದರಲ್ಲಿ 150 ದೈವಿಕ ದೃಷ್ಟಾಂತಗಳು, ನೂರಾರು ಸಾಕ್ಷಿಗಳ ಸಾಕ್ಷ್ಯದೊಂದಿಗೆ ಬರೆಯಲಾಗಿದೆ. ಈ ಕಾರ್ಯ ಯಾರಿಂದಲೂ ಗೌಪ್ಯವಾಗಿ ಉಳಿದಿಲ್ಲ. ನನ್ನ ಪರವಾಗಿ ಅಲ್ಲಾಹನ ಪರಿಪಕ್ವವಾದ ಮತ್ತು ಪರಿಶುದ್ಧ ದೃಷ್ಟಾಂತಗಳು ಮಳೆಯ ರೂಪದಲ್ಲಿ ಸುರಿಯುತ್ತವೆ. ಈ ಭವಿಷ್ಯವಾಣಿಗಳ ಪೂರ್ಣಗೊಳ್ಳುವ ಎಲ್ಲಾ ಸಾಕ್ಷಿಗಳನ್ನು ಒಟ್ಟುಗೂಡಿಸಿದರೆ ಅವು 60 ಲಕ್ಷಕ್ಕಿಂತಲೂ ಹೆಚ್ಚಾಗುವುದೆಂದು ನಾನು ಭಾವಿಸುತ್ತೇನೆ. ಆದರೆ ಅಕಟಾಕಟ, ದ್ವೇಷ ಮತ್ತು ಭೌತಿಕ ಮೋಹ ಎಂತಹ ರೋಗವಾಗಿದೆ ಎಂದರೆ ಅದರಿಂದ ಮನುಷ್ಯನು ನೋಡಿಯೂ ನೋಡದಂತಾಗುತ್ತಾನೆ ಮತ್ತು ಆಲಿಸಿಯೂ ಕಿವುಡನಂತಾಗುತ್ತಾನೆ. ತಿಳಿದು ತಿಳಿಯದವನ ಹಾಗೆ ಆಗುತ್ತಾನೆ. ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ದೇವನಾಣೆ ಅವನು ನನ್ನ ಪರವಾಗಿ ಸ್ಪಷ್ಟಪಡಿಸಿದಂತಹ ದೃಷ್ಟಾಂತಗಳು, ಅದರ ಸಾಕ್ಷಿಗಳು ಒಂದು ಸ್ಥಳದಲ್ಲಿ ನಿಲ್ಲಿಸಿದರೆ ಆ ಸಂಖ್ಯೆ ಒಬ್ಬ ರಾಜನ, ಸೈನ್ಯದಷ್ಟು ಅಥವಾ ಅದಕ್ಕಿಂತ ಹೆಚ್ಚು ಸಾಕ್ಷಿಗಳಾಗಿರುವರು. ಆದರೂ ಸಹ ಈ ಭೂಮಿಯ ಮೇಲೆ ಎಂತೆಂತಹ ಪಾಪಗಳಾಗುತ್ತವೆ ಆ ದೃಷ್ಟಾಂತವನ್ನು ಸಹ ಜನರು ತಿರಸ್ಕರಿಸುತ್ತಿದ್ದಾರೆ. ಆಕಾಶವು ನನಗಾಗಿ ಸಾಕ್ಷಿ ನೀಡಿದೆ ಮತ್ತು ಭೂಮಿಯೂ ಸಹ, ಆದರೆ ಲೋಕದ ಹೆಚ್ಚಿನ ಜನರು ನನ್ನನ್ನು ಸ್ವೀಕರಿಸಲಿಲ್ಲ. (ಅದೇ ಪುಟ 107).

**ಈ ಜನರು ಸೂರ್ಯನನ್ನು ನೋಡಿಯೂ ರಾತ್ರಿ ಎಂದು ಹೇಳುತ್ತಾರೆ.**
**ಇವರು ಯಹೂದ್ಯರನ್ನು ಸಹ ಮೀರಿಸಿದ್ದಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. "ಇವರಿಗೆ ತೋರಿಸಿದಂತಹ ದೃಷ್ಟಾಂತಗಳು ನೂಹರ ಸಮುದಾಯಕ್ಕೆ ತೋರುವಂತಾದರೆ ಅವರು ಮುಳುಗಿ ಹೋಗುತ್ತಿರಲಿಲ್ಲ. ಲೂತರ ಸಮುದಾಯ ಅದನ್ನು ತಿಳಿದಿದ್ದರೆ ಅವರ ಮೇಲೆ ಕಲ್ಲುಗಳ ಬೀಳುತ್ತಿರಲಿಲ್ಲ. ಆದರೆ ಈ ಜನರು ಸೂರ್ಯನನ್ನು ನೋಡಿಯೂ ಹೇಳುತ್ತಾರೆ. ರಾತ್ರಿಯಿದೆ ಎಂದು, ಇವರು ಯಹೂದ್ಯರನ್ನು ಸಹ ಮೀರಿಸಿದ್ದಾರೆ. ಅಲ್ಲಾಹನ ದೃಷ್ಟಾಂತಗಳನ್ನು ತಿರಸ್ಕರಿಸುವುದು ಸುಲಭವಲ್ಲ. ಯಾವ ಕಾಲಕ್ಕೂ ಅದರ ಪರಿಣಾಮ ನೆಟ್ಟಗಾಗಲಿಲ್ಲವೆಂದ ಮೇಲೆ ಈಗ ಹೇಗೆ ತಾನೇ ನೆಟ್ಟಗಾಗುವುದು? ಆದರೆ ಈ ಕಾಲದಲ್ಲಿ ನಾಸ್ತಿಕತೆ ಹರಡಿದೆ ಮತ್ತು ಹೃದಯಗಳು ಕಠಿಣಗೊಂಡಿವೆ, ಭಯಪಡುವುದಿಲ್ಲ. ನಾನು ಈ ಜನರಿಗೆ ಯಾರಿಂದ ಹೋಲಿಸಿ ಹೇಳಲಿ, ಈ ಜನರು ಕುರುಡರಂತಾಗಿದ್ದಾರೆ, ಯಾರು ಸೂರ್ಯನ ಅಸ್ತಿತ್ವವನ್ನು ಅಲ್ಲಗಳೆಯುತ್ತಾರೆ ಮತ್ತು ತನ್ನ ಕುರುಡುತನ ಅರುಹುದಿಲ್ಲ, ಈ ಜನರು ಆ ಯಹೂದ್ಯರ, ಕ್ರೈಸ್ತರ ಹಾಗೆ, ಅವರು ಅಲ್ಲಾಹನ ನೂರಾರು ನೆರವು, ಕಾರ್ಯಗಳು ಮತ್ತು ಪವಾಡಗಳು ಹಝ್ರತ್ ರಸೂಲುಲ್ಲಾಹ್(ಸ) ರವರಿಂದ ಪ್ರಕಟವಾಗಿದ್ದು ಕಾಣುವುದಿಲ್ಲ. ಉಹದ್ ಯುದ್ಧ ಮತ್ತು ಹುದೈಬಿಯಾದ ಕಥೆಯನ್ನು ಪ್ರಸ್ತಾಪಿಸುತ್ತಾರೆ. ಹಝ್ರತ್ ಈಸಾ(ಅ) ರವರ ಬಗ್ಗೆಯೂ ಅವರ ಅದೇ ಗತಿಯಾಗಿದೆ. (ಅದೇ ಪುಟ 110).

ಅವರು ನುಡಿದರು. ನಾನು ಈ ಮೂಢರಿಗೆ ಏನು ಹೇಳಬೇಕು? ಹೇಗೆ ಅವರ ಹೃದಯಗಳಲ್ಲಿ ಸತ್ಯತೆಯ ಬಗ್ಗೆ ಪ್ರೇಮ ಮೂಡಿಸಲಿ? ಅವರು ವಿದೂಷಕರ ಹಾಗೆ ತಿರುಗಾಡುತ್ತಿದ್ದಾರೆ. ನಗೆ, ಅಪಹಾಸ್ಯ ಅವರ

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಈ ಜಲ್ಸ ಯಾವುದೇ ಲೌಕಿಕ ಜಾತ್ರೆ ಅಲ್ಲ ಬದಲಿಗೆ, ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಆಲಿಸಲು ಮತ್ತು ಅವುಗಳನ್ನು ನಮ್ಮ ಜೀವಿತದಲ್ಲಿ ಅಳವಡಿಸಲು ನಾವು ಈ ಜಲ್ಸದಲ್ಲಿ ಸೇರುತ್ತೇವೆ.**

**ಲೋಕದಲ್ಲಿ ಅನ್ಯರು ತಮಗೆ ಸ್ವಯಂ ಸೇವಕರು ಕೆಲಸ ಮಾಡಲು ಲಭಿಸಲಿ ಎಂದು ಆಶಿಸುತ್ತಾರೆ. ಆದರೆ ಅಹ್ಮದಿಯಾ ಜಮಾಅತಿನ ಚರಿತ್ರೆ ಸಂಪೂರ್ಣವಾಗಿ ತದ್ವಿರುದ್ಧವಾದ ಉದಾಹರಣೆಯನ್ನು ತೋರಿಸುತ್ತದೆ. ಎಷ್ಟು ಸ್ವಯಂಸೇವಕರು ಆಗಮಿಸುತ್ತಾರೆಂದರೆ ಅವರನ್ನು ಹೇಗೆ ವಿನಿಯೋಗಿಸಬೇಕೆಂಬ ಬಗ್ಗೆ ವ್ಯವಸ್ಥಾಪಕರಿಗೆ ಕಷ್ಟ ತಲೆದೋರುತ್ತದೆ.**

**ಜಲ್ಸದ ಮೂರು ದಿನಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆಯನ್ನು ಯಾವ ಭಾವನೆಯೊಂದಿಗೆ ಮಾಡಬೇಕೆಂದರೆ ತಮ್ಮ ಮೇಲಾಧಿಕಾರಿಗಳಿಂದ ಅಥವಾ ಯಾವುದೇ ಅತಿಥಿಯಿಂದ ಪ್ರತಿಫಲ ಪಡೆಯುವವರಾಗದೆ ಅಲ್ಲಾಹನ ಸಂಪ್ರೀತಿ ಗಳಿಸಲು ಸೇವೆ ಮಾಡುವವರಾಗಬೇಕು.**

**ಜಲ್ಸ ಸಾಲಾನ ಬ್ರಿಟನ್ 2022 ರಲ್ಲಿ ತಮ್ಮ ಕರ್ತವ್ಯಗಳನ್ನು ಹೇಗೆ ನಿರ್ವಹಿಸಬೇಕು ಎಂಬುದರ ಕುರಿತು ಆತಿಥೇಯರು ಮತ್ತು ಅತಿಥಿಗಳಿಗಾಗಿ ಕೆಲವು ಸಲಹೆಗಳು**

**ಜಲ್ಸಾದ ದಿನಗಳಲ್ಲಿ ಸಾಮಾನ್ಯ ಪ್ರಾರ್ಥನೆಯೊಂದಿಗೆ ದುರೂದ್ ಶರೀಫ್ ಅನ್ನು ಪಠಿಸುವ ಗಮನ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–08–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಈ ವರ್ಷ ಜಲ್ಸಾ ಸಾಲಾನ(ವಾರ್ಷಿಕ ಸಮ್ಮೇಳನ) ಯುಕೆವನ್ನು 2019ರ ನಂತರ ಮತ್ತೆ ದೊಡ್ಡ ಪ್ರಮಾಣದಲ್ಲಿ ಆಯೋಜಿಸಲಾಗುತ್ತಿದೆ. ಕಳೆದ ವರ್ಷವೂ ಸೀಮಿತ ಸಂಖ್ಯೆಯಲ್ಲಿ ಜಲ್ಸಾ ನಡೆಸಲಾಗಿತ್ತು. ಈ ವರ್ಷವೂ ಸಹ ಈ ಜಲ್ಸವು ಕೇವಲ ಬ್ರಿಟನ್ ಜಮಾಅತ್‌ನ ಜಲ್ಸವಾಗಿದೆ ಮತ್ತು ವಿದೇಶಿ ಅತಿಥಿಗಳು ಬಹಳ ಸೀಮಿತ ಸಂಖ್ಯೆಯಲ್ಲಿ ಸೇರುತ್ತಿದ್ದಾರೆ, ಆದರೆ ಬ್ರಿಟನ್‌ನ ಎಲ್ಲಾ ಜಮಾಅತ್‌ಗಳು ಮೂರು ದಿನಗಳಲ್ಲಿ ಸೇರಲು ಅನುಮತಿಸಲಾಗಿದೆ, ಇನ್‌ಶಾಅಲ್ಲಾಹ್. ಇನ್‌ಶಾಅಲ್ಲಾಹ್ ಉತ್ತಮ ಹಾಜರಾತಿ ಇರುತ್ತದೆ ಎಂದು ಆಶಿಸಲಾಗಿದೆ.

ನಮಗೆಲ್ಲರಿಗೂ ತಿಳಿದಿರುವ ಹಾಗೆ ಕೋವಿಡ್ ಮಹಾಮಾರಿಯ ಕಾರಣದಿಂದ ಜಲ್ಸ ಸಾಲಾನದ ನಿರಂತರ ಮುಂದುವರಿಕೆಯನ್ನು ಮುರಿಯಬೇಕಾಯಿತು. ಜಲ್ಸದ ಅನುಗ್ರಹಗಳನ್ನು ಕ್ರಮಬದ್ಧವಾಗಿ ಗಳಿಸಲು ನಮಗೆ ಸಾಧ್ಯವಾಗಲಿಲ್ಲ. ಒಂದು ವರ್ಷವಂತು ಇಲ್ಲವೇ ಇಲ್ಲ. ಇಂದು ಕೂಡ ಕೋವಿಡ್ ರೋಗ ಪೂರ್ಣವಾಗಿ ಕೊನೆಗೊಂಡಿಲ್ಲ. ಕೆಲವು ಜಾಗಗಳಲ್ಲೂ ಇಲ್ಲೂ ಲೋಕದ ಇತರ ದೇಶಗಳಲ್ಲೂ ಕಳೆದ ದಿನಗಳಲ್ಲಿ ಇದು ವರ್ಧಿಸಿದೆ. ಒಟ್ಟು ಸೇರುವ ವಿಷಯದಲ್ಲಿ ಇದ್ದ ನಿರ್ಬಂಧಗಳು ಈಗ ಸರ್ಕಾರದ ಕಡೆಯಿಂದ ಅಷ್ಟೇನೂ ಇಲ್ಲ. ಆದರೆ ಇದರಿಂದ ನಾವು ಮುಂಜಾಗ್ರತಾ ಕ್ರಮವನ್ನು ಕೊನೆಗೊಳಿಸಬೇಕೆಂದು ಇದರ ಅರ್ಥವಲ್ಲ.

ಎಲ್ಲಾ ಮುನ್ನೆಚ್ಚರಿಕೆಯ ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಮತ್ತು ಒಳಗೊಂಡಿರುವ ಎಲ್ಲರೂ ಅನುಸರಿಸಬೇಕು.

ಮುನ್ನೆಚ್ಚರಿಕೆ ಕ್ರಮಗಳಲ್ಲೊಂದು ಏನೆಂದರೆ, ಎಲ್ಲಾ ಭಾಗವಹಿಸುವವರು ಜಲ್ಸದಲ್ಲಿ ಕುಳಿತುಕೊಳ್ಳುವಾಗ ಮತ್ತು ಡ್ಯೂಟಿನಲ್ಲಿರುವವರು ತಮ್ಮ ಡ್ಯೂಟಿಯನ್ನು ನೀಡುವಾಗ ಅಥವಾ ಅವರು ಹೊರಗೆ ನಡೆಯುವಾಗಲೂ ಮಾಸ್ಕ್ ಧರಿಸಬೇಕು. ಅದೇ ರೀತಿ ಜಲ್ಸಕ್ಕೆ ಆಗಮಿಸುವಾಗ ಮತ್ತು ಹೋಗುವಾಗ ಜಲ್ಸದ ವ್ಯವಸ್ಥಾಪಕರು ಒದಗಿಸುವ ಹೋಮಿಯೋಪಥಿ ಔಷಧಿಗಳನ್ನು ಬಳಸಲು ಬದ್ಧರಾಗಬೇಕು. ಅಲ್ಲಾಹನು ಅದರಲ್ಲಿ ಶಮನ ಇರಿಸಲಿ. ಔಷಧಿಯಲ್ಲಿ ಶಮನ ನೀಡುವುದು ಅಲ್ಲಾಹನ ಕೆಲಸವಾಗಿದೆ. ಆದರೆ ನಾವು ಬಾಹ್ಯವಾದ ಪ್ರಯತ್ನ ಮಾಡಬೇಕು. ಭಾಗಿಯಾಗುವವರು ಸಂಘಟಕರೊಡನೆ ಸಹಕರಿಸಬೇಕು.

ಜಲ್ಸದ ಸಂದರ್ಭದಲ್ಲಿ ಕಾರ್ಯಕರ್ತರೂ ಸ್ವಯಂಸೇವಕರೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೋಸ್ಕರ ತಮ್ಮ ಸಮಯವನ್ನು ಬಲಿಯರ್ಪಿಸುತ್ತಾರೆ. ಸಾಮಾನ್ಯವಾಗಿ ಜಲ್ಸ ಪ್ರಾರಂಭವಾಗುವ ಒಂದು ವಾರದ ಮೊದಲು ಖುತ್‌ಬದಲ್ಲಿ ನಾನು ಕೆಲವು ವಿಷಯಗಳ ಬಗ್ಗೆ ಅವರ ಗಮನ ಹರಿಸುತ್ತಾ ಇರುತ್ತೇನೆ. ಆದರೆ ಕಳೆದ ವಾರದ ಖುತ್‌ಬದಲ್ಲಿ ಆ ವಿಷಯಗಳ ಬಗ್ಗೆ ಗಮನ ಹರಿಸುವುದಕ್ಕೆ ಸಂಬಂಧಿಸಿ ವಿವರಿಸಲಾಗಲಿಲ್ಲ. ಆದುದರಿಂದ ಇಂದಿನ ಖುತುಬದಲ್ಲಿ ಆ ವಿಷಯಗಳ ಬಗ್ಗೆ ಸ್ವಲ್ಪ ವಿವರಿಸುವೆನು. ಕೆಲವು ಮಕ್ಕಳು, ಯುವಕರು ಮತ್ತು ಸೇವಡ ಸಲ್ಲಿಸುವುದಕ್ಕೆ ಹೊಸದಾಗಿ ಬಂದು ಸೇರಿದವರಾಗಿದ್ದಾರೆ ಅವರಿಗಾಗಿ ಕೆಲವಿ ವಿಷಯಗಳನ್ನು ಪ್ರಸ್ತಾಪಿಸುತ್ತೇನೆ. ಕಳೆದ ಮೂರು ವರ್ಷಗಳಲ್ಲಿ, ಜಲ್ಸಾ ಕರ್ತವ್ಯದ ಅನುಭವವಿಲ್ಲದ ಅನೇಕ ಜನರು ಪಾಕಿಸ್ತಾನದಿಂದ ಇಲ್ಲಿಗೆ ಬಂದಿದ್ದಾರೆ. ಅಲ್ಲಿ ಜಲ್ಸಗಳು ನಡೆಯದೇ ಬಹಳ ವರ್ಷಗಳಾಗಿವೆ. ಇದರ ಕಡೆ ಗಮನ ಹರಿಸಿದರೆ ಅವರಿಗೆ ತಮ್ಮ ಕರ್ತವ್ಯಗಳ ಬಗ್ಗೆ ಅರಿವಾಗುತ್ತದೆ. ಅದೇ ರೀತಿ ಹಳೆಯ ಕಾರ್ಯಕರ್ತರೂ ಸಹ ತಮ್ಮ ಕರ್ತವ್ಯಗಳನ್ನು ನೆನಪಿಸಿಕೊಳ್ಳುತ್ತಾರೆ. ಆದಾಗ್ಯೂ, ನಾನು ಈ ಬಗ್ಗೆ ಸಂಕ್ಷಿಪ್ತವಾಗಿ ಹೇಳುತ್ತೇನೆ ಮತ್ತು ಅತಿಥಿಗಳಿಗೂ ಕೆಲವು ಮಾತುಗಳನ್ನು ಹೇಳುವೆನು. ನಾವು ಈ ವಿಷಯಗಳ ಬಗ್ಗೆ ಲಕ್ಷ್ಯ ನೀಡುವುದಾದರೆ ಇನ್‌ಶಾಅಲ್ಲಾಹ್ ಜಲ್ಸದ ನೈಜ ಪರಿಸರದಿಂದ ನಾವು ಲಾಭ ಪಡೆಯುತ್ತಾ ಇರುವವರಾಗುವೆವು.

ಈ ಜಲ್ಸ ಯಾವುದೇ ಲೌಕಿಕ ಜಾತ್ರೆ ಅಲ್ಲವೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಇನ್, ಸಂಪುಟ–6, ಪುಟ–395)

ಬದಲಿಗೆ, ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಆಲಿಸಲು ಮತ್ತು ಅವುಗಳನ್ನು ನಮ್ಮ ಜೀವಿತದಲ್ಲಿ ಅಳವಡಿಸಲು ನಾವು ಈ ಜಲ್ಸದಲ್ಲಿ ಸೇರುತ್ತೇವೆ. ಅಲ್ಲಾಹನ ಮತ್ತು ಪ್ರವಾದಿ(ಸ)ರವರು ಹೇಳಿದ ವಿಷಯಗಳನ್ನು ನಾವು ಅನುಸರಿಸಿದಾಗ ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಉತ್ತಮ ರೀತಿಯಲ್ಲಿ ಈಡೇರಿಸುವವರಾಗಬಹುದು. ಅದೇನೇ ಇರಲಿ, ನಾನು ಹೇಳಿದ ಹಾಗೆ ಮೊದಲು ಕಾರ್ಯಕರ್ತರಿಗೆ ಒಂದಿಷ್ಟು ವಿಷಯಗಳನ್ನು ಹೇಳಬಯಸುತ್ತೇನೆ. ಮಾಸ್ಕ್‌ನ ಬಗ್ಗೆ ಮತ್ತು ಔಷಧದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ, ಅದನ್ನು ಅನುಸರಿಸಿರಿ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ನಮ್ಮ ಯುವಕರು, ಮಕ್ಕಳು, ವೃದ್ಧರು, ಮಹಿಳೆಯರು ಸಹ ಈ ಬಗ್ಗೆ ಉತ್ಸಾಹವನ್ನು ಹೊಂದಿದ್ದಾರೆ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅತಿಥಿಗಳಿಗೆ ಸೇವೆ ಸಲ್ಲಿಸಲು ನಾವು ನಮ್ಮ ಸೇವೆಗಳನ್ನು ನೀಡುತ್ತಿದ್ದೇವೆ ಎಂದು ಅವರೆಲ್ಲರು ಅರ್ಥಮಾಡಿಕೊಂಡಿರುತ್ತಾರೆ. ಮತ್ತು ಉತ್ತಮ ರೀತಿಯಲ್ಲಿ ತಮ್ಮ ಸೇವೆಯನ್ನು ನೀಡಬೇಕು. ಸೇವೆ ಮಾಡುವವರು ಯಾವುದೇ ವೃತ್ತಿ ಅಥವಾ ಕುಟುಂಬದವರು, ಶ್ರೀಮಂತರು ಅಥವಾ ಬಡವರು, ಎಲ್ಲರೂ ಈ ಮನೋಭಾವದಿಂದ ಬಂದಿರುತ್ತಾರೆ. ಜಲ್ಸದ ಕೆಲಸ ಕೇವಲ ಜಲ್ಸದ ಮೂರು ದಿನಗಳಲ್ಲಿ ಮಾತ್ರ ನಡೆಯುವಂತಹದು ಅಲ್ಲ. ಅನೇಕ ವಾರಗಳ

ಮೊದಲು ಜಲ್ಸಕ್ಕೆ ಸಂಬಂಧಿಸಿದ ಕೆಲಸಗಳನ್ನು ಪ್ರಾರಂಭಿಸಲಾಗುತ್ತಿವೆ. ಈ ಕೆಲಸ ಹೇಗೆ ನಡೆಯುತ್ತಾ ಇದೆ ಎನ್ನುವುದರ ಬಗ್ಗೆ ಎಂ.ಟಿ.ಎ. ತನ್ನ ಸಮಾಚಾರಗಳಲ್ಲಿ ಚಿಕ್ಕ ಚಿಕ್ಕ ಕ್ಲಿಪ್‌ಗಳ ಮೂಲಕ ಬಿತ್ತರಿಸುತ್ತಿದೆ. ನಿಸ್ಸಂಶಯವಾಗಿ ಕೆಲವು ಕೆಲಸಗಳನ್ನು ಹೊರಗಿನ ಕಂಪೆನಿಗಳ ಮೂಲಕ ಮತ್ತು ಗುತ್ತಿಗೆದಾರರ ಮೂಲಕ ನಡೆಸಲಾಗಿದೆ. ಆದರೆ ಬೇರೆ ಅನೇಕ ಕೆಲಸಗಳನ್ನು ಮಾಡಲು ಕಾರ್ಯನಿರ್ವಾಹಕರ ಶಕ್ತಿಯ ಆವಶ್ಯಕತೆ ಇರುತ್ತದೆ. ಸ್ವಯಂಸೇವಕರು ತಮ್ಮ ಸಮಯವನ್ನು ಬಲಿಯರ್ಪಿಸಿ ಸೇವೆಯನ್ನು ಮಾಡಿ ಈ ಕೆಲಸ ಮಾಡುತ್ತಾರೆ. ನಾನು ಹೇಳಿದ್ದೇನೆಂದರೆ ಪ್ರತಿಯೊಂದು ವರ್ಗದ ಜನರು ಅದರಲ್ಲಿ ಭಾಗಿಯಾಗಿದ್ದಾರೆ.

ಲೋಕದಲ್ಲಿ ಅನ್ಯರು ತಮಗೆ ಸ್ವಯಂ ಸೇವಕರು ಕೆಲಸ ಮಾಡಲು ಲಭಿಸಲಿ ಎಂದು ಆಶಿಸುತ್ತಾರೆ. ಆದರೆ ಅಹ್ಮದಿಯಾ ಜಮಾಅತಿನ ಚರಿತ್ರೆ ಸಂಪೂರ್ಣವಾಗಿ ತದ್ವಿರುದ್ಧವಾದ ಉದಾಹರಣೆಯನ್ನು ತೋರಿಸುತ್ತದೆ. ಎಷ್ಟು ಸ್ವಯಂಸೇವಕರು ಆಗಮಿಸುತ್ತಾರೆಂದರೆ ಅವರನ್ನು ಹೇಗೆ ವಿನಿಯೋಗಿಸಬೇಕೆಂಬ ಬಗ್ಗೆ ವ್ಯವಸ್ಥಾಪಕರಿಗೆ ಕಷ್ಟ ತಲೆದೋರುತ್ತದೆ.

ಜಲ್ಸದ ನಿಯಮಿತ ಕರ್ತವ್ಯಗಳಲ್ಲಿ, ಮೊದಲು ಚಾರ್ಟ್‌ಗಳನ್ನು ತಯಾರಿಸಲಾಗುತ್ತದೆ, ಕಾರ್ಯಕ್ರಮಗಳನ್ನು ಮಾಡಲಾಗುತ್ತದೆ, ಪ್ರತಿ ಇಲಾಖೆಗೆ ಅದರ ಅಗತ್ಯಗಳಿಗೆ ಅನುಗುಣವಾಗಿ ಕಾರ್ಮಿಕರನ್ನು ಒದಗಿಸುವ ಪ್ರಯತ್ನಗಳನ್ನು ಮಾಡಲಾಗುತ್ತದೆ. ಆದರೆ ಜಲ್ಸದ ಮೊದಲು ವಖಾರೆ ಅಮಲ್ ಮಾಡಲಾಗುತ್ತದೆ ಅಥವಾ ಜಲ್ಸದ ನಂತರ ಮಾಡಲಾಗುತ್ತದೆ. ಕೆಲವೊಮ್ಮೆ ಇದರಲ್ಲಿ ನಿರೀಕ್ಷೆಗಿಂತ ಹೆಚ್ಚಿನ ಜನರು ಆಗಮಿಸುತ್ತಾರೆ ಏಕೆಂದರೆ ಸಾಮಾನ್ಯವಾಗಿ ಎಲ್ಲರಿಗು ಇದರಲ್ಲಿ ಆಮಂತ್ರಿಸಲಾಗಿರುತ್ತದೆ. ಕಳೆದ ಭಾನುವಾರವಷ್ಟೇ, ಹದೀಕತುಲ್-ಮಹ್ದಿಯಲ್ಲಿ ಅನೇಕ ಕಾರ್ಮಿಕರು ಜಮಾಯಿಸಿದರು, ಇದನ್ನು ವ್ಯವಸ್ಥಾಪಕ ಮಂಡಳಿಯು ನಿರೀಕ್ಷಿಸಿರಲಿಲ್ಲ. ಅವರಿಗೆ ಊಟದ ಸರಿಯಾದ ವ್ಯವಸ್ಥೆ ಸಹ ಮಾಡಲಾಗಲಿಲ್ಲ ಎಂದು ನನಗೆ ತಿಳಿದು ಬಂದಿದೆ. ವ್ಯವಸ್ಥಾಪಕ ಮಂಡಳಿ ಅದರ ಬಗ್ಗೆ ಮೊದಲೇ ಗಮನ ಹರಿಸಿ ಸರಿಯಾದ ವ್ಯವಸ್ಥೆ ಮಾಡಬೇಕಾಗಿತ್ತು. ಇದು ಅತಿಥಿ ಸೇವೆ ಮಾಡುವ ವಿಭಾಗ ಮಾಡಬೇಕಾದ ಕೆಲಸವಾಗಿದೆ. ಈ ಸ್ವಯಂಸೇವಕರು ಮಧ್ಯಾಹ್ನದ ಊಟದ ಸಮಯದಲ್ಲಿ ಆಗಮಿಸಿದವರಾಗಿರಲಿಲ್ಲ. ಅವರು ಬೆಳಗ್ಗಿನಿಂದಲೇ ಕೆಲಸ ಮಾಡುತ್ತಾ ಇದ್ದರು ಅಥವಾ ಅಲ್ಲಿ ಉಪಸ್ಥಿತರಿದ್ದರು. ಕಳೆದ ವಾರದ ಖುತ್‌ಬದ ಕೊನೆಯ ಭಾಗದಲ್ಲಿ ಜಲ್ಸದಲ್ಲಿ ಕೆಲಸ ಮಾಡುವವರಿಗೋಸ್ಕರ ಪ್ರಾರ್ಥಿಸಬೇಕೆಂದು ನಾನು ಹೇಳಿದ್ದೆ. ಆ ಖುತುಬ ಆಲಿಸಿದ ಕೂಡಲೆ ಅನೇಕರು ಭಾವಾವೇಶದಿಂದ ತಮ್ಮನ್ನು ಜಲ್ಸದ ಸೇವೆಗೋಸ್ಕರ ಅರ್ಪಿಸಿದರು. ಒಟ್ಟಾರೆ ಹೇಳುವುದಾದರೆ ವಾರಾಂತ್ಯದಲ್ಲಿ ವ್ಯವಸ್ಥಾಪಕ ಮಂಡಳಿ ವಿಶಿಷ್ಟವಾದ ವ್ಯವಸ್ಥೆ ಮಾಡಬೇಕು. ಅತಿಥಿಸತ್ಕಾರ ವಿಭಾಗದವರು ಮುಂದೆ ಇದರ ಕಡೆ ಗಮನ ಹರಿಸಬೇಕು.

ಅತಿಥಿ ಸತ್ಕಾರ ವಿಭಾಗದವರು ಜಲ್ಸದ ದಿನಗಳಲ್ಲಿ ವಿಫುಲವಾದ ಪ್ರಮಾಣದಲ್ಲಿ ಆಹಾರಗಳನ್ನು ಸಿದ್ಧಪಡಿಸಬೇಕು. ಅಂದಾಜಿನ ಲೆಕ್ಕ ಸರಿಯಿಲ್ಲದ ಕಾರಣ ಈ ವರ್ಷ ನಡೆಸುತ್ತಿರುವ ಜಲ್ಸದಲ್ಲಿ ಅನೇಕ ಜನರ ಭಿನ್ನ ಭಿನನ್ನ ಯೋಚನೆಗಳಿವೆ, ಕೆಲವರ ಪ್ರಕಾರ ಈ ಸಾಂಕ್ರಮಿಕ ರೋಗದ ಕಾರಣದಿಂದ ಜನರು ಜಲ್ಸದಲ್ಲಿ ಆಗಮಿಸುತ್ತಾರೋ ಇಲ್ಲವೋ, ಕೆಲವರು ಭಯದಿಂದ ಬರುತ್ತಾರೋ ಇಲ್ಲವೋ, ಕೆಲವರ ಅಭಿಪ್ರಾಯದಲ್ಲಿ ಜಲ್ಸವು ಸ್ವಲ್ಪ ಅವಧಿಯ ನಂತರ ನಡೆಯುತ್ತಿದೆ ಹಾಗಾಗಿ ಖಂಡಿತ ಬರುತ್ತಾರೆ ಎಂದು ಯೋಚಿಸುತ್ತಿದ್ದಾರೆ ಆದರೆ ಸಾಮಾನ್ಯವಾಗಿ ನಮ್ಮ ವ್ಯವಸ್ಥಾ ಮಂಡಳಿಯು ಅದರಲ್ಲಿಯೂ ವಿಶೇಷವಾಗಿ ಊಟ ತಯಾರಿಸುವವರು ಝಿಯಾಫತ್‌ನವರು ಖರ್ಚು ಮಾಡುವ ಪ್ರಶ್ನೆ ಬಂದಾಗ ನಕಾರಾತ್ಮಕ ದಿಕ್ಕಿನ ಕಡೆಗೆ ಹೋಗುತ್ತಾರೆ. ಅತಿಥಿಗಳು ಕಡಿಮೆ ಪ್ರಮಾಣದಲ್ಲಿ ಆಗಮಿಸುತ್ತಾರೆ ಆದ್ದರಿಂದ ಕಡಿಮೆ ಪ್ರಮಾಣದಲ್ಲಿ ತಯಾರಿಸುತ್ತಾರೆ ಆದರೆ ಸಂಪೂರ್ಣವಾಗಿ ತಪ್ಪು ವಿಚಯವಾಗಿದೆ. ವಿಫುಲವಾದ ಪ್ರಮಾಣದ ಆಹಾರವನ್ನು ತಯಾರಿಸಬೇಕು.

ಬರುವ ಅತಿಥಿಗಳನ್ನು ಸಂಪೂರ್ಣವಾಗಿ ಸತ್ಕರಿಸುವುದು ಝಿಯಾಫತ್(ಅತಿಥಿ ಸತ್ಕಾರ) ವಿಭಾಗದ ಜವಾಬ್ದಾರಿಯಾಗಿದೆ.

ಅದೇ ರೀತಿ, ಆಹಾರದ ಬಗ್ಗೆ, ಈ ದಿನಗಳು ಬೇಸಿಗೆಯ ದಿನಗಳು ಎಂದು ನಾನು ಸೂಚನೆ ನೀಡುತ್ತೇನೆ. ಹೀಗಾಗಿ ಝಿಯಾಫತ್ ವಿಭಾಗವು ಮಾಂಸವನ್ನು ಕತ್ತರಿಸಿದ ತಕ್ಷಣ ಆ ಮಾಂಸವನ್ನು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ಚಿಲ್ಲರ್‌ನಲ್ಲಿರಿಸಬೇಕು. ಅದು ಕತ್ತರಿಸಿದಂತೆಯೇ ಅದನ್ನು ಹಾಗೆಯೇ ದಿನವಿಡೀ ಹೊರಗೆ ಇಟ್ಟಿದ್ದರಿಂದ ಅದು ಹಾಳಾಗುತ್ತದೆ ಮತ್ತು ಜನರನ್ನು ಅನಾರೋಗ್ಯಗೊಳಿಸುತ್ತದೆ. ಅದೇ ರೀತಿ, ಉಳಿದ ಆಹಾರವನ್ನು ಸಹ ತೃಪ್ತಿಪಡಿಸಕೊಳ್ಳಬೇಕು. ಆದಾಗ್ಯೊ, ನಾನು ಮೊದಲು ಹೇಳಿದ ಹಾಗೆ ಸ್ವಯಂಸೇವಕರು ಸೇವೆ ಸಲ್ಲಿಸಲು ಬಂದವರು. ಅವರಿಗೆ ಊಟ ಸಿಕ್ಕಿತೋ ಇಲ್ಲವೋ ಸದ್ದಿಲ್ಲದೆ ಅವರೆಲ್ಲರು ಹೊರಟರು ಹೋದರು ಆದರೆ ವ್ಯವಸ್ಥಪಕ ಮಂಡಳಿಯ ಕೊರತೆ ಇದರಲ್ಲಿ ಎದ್ದು ಕಾಣುತ್ತಿತ್ತು.

ನಾನು ಕಾರ್ಯಕರ್ತರೊಂದಿಗೆ ಹೇಳಲು ಇಚ್ಛಿಸುವುದೇನೆಂದರೆ ಜಲ್ಸದ ಮೂರು ದಿನಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆಯನ್ನು ಯಾವ ಭಾವನೆಯೊಂದಿಗೆ ಮಾಡಬೇಕೆಂದರೆ ತಮ್ಮ ಮೇಲಾಧಿಕಾರಿಗಳಿಂದ ಅಥವಾ ಯಾವುದೇ ಅತಿಥಿಯಿಂದ ಪ್ರತಿಫಲ ಪಡೆಯುವವರಾಗದೆ ಅಲ್ಲಾಹನ ಸಂಪ್ರೀತಿ ಗಳಿಸಲು ಸೇವೆ ಮಾಡುವವರಾಗಬೇಕು. ನೀವು ಹಝ್ರತ್ ಪೈಗಂಬರ್(ಸ)ರ ಒಬ್ಬ ಸಹಾಬಿಯ ಮತ್ತು ಅವರ ಪತ್ನಿಯ ಮಾದರಿ ವರ್ತನೆಯನ್ನು ನಿಮ್ಮ ಮುಂದಿರಿಸಬೇಕು. ಆ ಸಹಾಬಿ ಹಸಿದಿರುವ ಮಕ್ಕಳನ್ನು ನಿದ್ರಿಸುವಂತೆ ಮಾಡಿ ತಾನು ಸಹ ಹಸಿವೆಯಿಂದಿರುವಾಗ ಅತಿಥಿ ಸತ್ಕಾರದ ಹೊಣೆಗಾರಿಕೆಯನ್ನು ನಿರ್ವಹಿಸಿದರು. ಅವರು ದೀಪವನ್ನು ನಂದಿಸಿ ತಾನು ಸಹ ಅತಿಥಿಯೊಂದಿಗೆ ಊಟ ಮಾಡುತ್ತಿದ್ದೇನೆ ಎಂದು ಅತಿಥಿ ಭಾವಿಸುವಂತೆ ಮಾಡಿದರು. ಅಲ್ಲಾಹನು ಆ ಸಹಾಬಿಯ ಆ ಕೆಲಸವನ್ನು ಎಷ್ಟು ಪ್ರಶಂಸಿದನೆಂದರೆ ಅದರ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ತಿಳಿಸಿದನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನೀವು ರಾತ್ರಿ ಮಾಡಿದ ಕೆಲಸದ ಕಾರಣದಿಂದ ಅಲ್ಲಾಹನು ಸಹ ನಕ್ಕನು. ಅಲ್ಲಾಹನು ಬಹಳ ಸಂತೋಷಗೊಂಡು ನಕ್ಕನು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಸಹ ಇಂತಹ ಬಲಿದಾನ ಮಾಡುವವರ ಬಗ್ಗೆ ಪ್ರಸ್ತಾಪಿಸಿದ್ದಾನೆ.

ಅವರು ನಿಸ್ವಾರ್ಥತೆಯಿಂದ ಬಲಿದಾನ ನೀಡುತ್ತಾರೆ. ಅಂತಹ ಜನರೇ ಜಯಶಾಲಿಗಳಾಗುವವರಾಗಿದ್ದಾರೆ. (ಸ'ಹೀಹ್ ಅಲ್-ಬುಖಾರಿ, ಕಿತಾಬ್ ಮನಾಕಿಬ್ ಅಲ್-ಅನ್ಸಾರ್, ಹದೀಸ್-3798)

ಸಹಾಬರು ಮಾಡುತ್ತಿದ್ದ ಅತಿಥಿ ಸತ್ಕಾರ ಆ ರೀತಿಯಾಗಿತ್ತು. ಅವರು ಆ ರೀತಿ ಅತಿಥಿಗಳಿಗೆ ಸೇವೆ ಮಾಡುತ್ತಿದ್ದರು.

ಅಲ್ಲಾಹನ ಸಂಪ್ರೀತಿ ಗಳಿಸಲು ಅತಿಥಿಗಳಿಗೆ ಸೇವೆ ಮಾಡುವ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸಲು ಪ್ರಯತ್ನಿಸುವವರು ಎಷ್ಟು ಭಾಗ್ಯಶಾಲಿಗಳಾಗಿದ್ದಾರೆ. ಅತಿಥಿಗಳಾದರೋ ಈ ಕಾಲಘಟ್ಟದ ಇಮಾಮರ ಆಹ್ವಾನ ಪ್ರಕಾರ ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾತುಗಳನ್ನು ಆಲಿಸಲು ಮತ್ತು ಅಲ್ಲಾಹನ ಸಂಪ್ರೀತಿಯನ್ನು ಗಳಿಸುವ ಅಭಿಲಾಷೆಯನ್ನು ಹೊಂದಿ ಆಗಮಿಸಿದವರಾಗಿದ್ದಾರೆ.

ಆದುದರಿಂದ ಧರ್ಮದ ಉದ್ದೇಶಕ್ಕೋಸ್ಕರ ಆಗಮಿಸುವ ಅತಿಥಿಗಳಿಗೆ ಸೇವೆಯನ್ನು ಅಲ್ಲಾಹನ ಸಂಪ್ರೀತಿ ಗಳಿಸಲು ಮಾಡುವ ಸ್ವಯಂ ಸೇವಕರು ಬಹಳ ಭಾಗ್ಯಶಾಲಿಗಳಾಗಿದ್ದಾರೆ.

ವಿವಿಧ ಮನೋಭಾವದ ಜನರು ಬಹಳ ಸಂಖ್ಯೆಯಲ್ಲಿ ಆಗಮಿಸುವಾಗ ಅವರಲ್ಲಿ ಕೆಲವರು ಹೆಚ್ಚು ತೀವ್ರ ಸ್ವಭಾವದವರೂ ಇರುತ್ತಾರೆ. ಅವರು ಕೆಲವು ಸಾರಿ ಕಾರ್ಯಕರ್ತರೊಂದಿಗೆ ಕಠಿಣವಾಗಿ ಮಾತನಾಡುತ್ತಾರೆ. ಅಥವಾ ಏನಾದರೂ ವಸ್ತುವನ್ನು ಆವಶ್ಯಪಡುತ್ತಾರೆ. ಆದರೆ ಕಾರ್ಯಕರ್ತರು ಯಾರೊಂದಿಗೂ ಕಠಿಣವಾಗಿ ವರ್ತಿಸಬಾರದು. ಕಠಿಣವಾಗಿ ಮಾತನಾಡುವವರಿಗೆ ಕಠಿಣವಾಗಿ ಉತ್ತರ ನೀಡದೆ ಮುಗುಳು ನಗುತ್ತಾ ಉತ್ತರ ನೀಡಬೇಕು. ಅವರ ಆವಶ್ಯಕತೆ ಈಡೇರಿಸಲು ಸಾಧ್ಯವಿದ್ದರೆ ಈಡೇರಿಸಿ ಕೊಡಿರಿ. ಹಾಗೆ ಮಾಡಲು ಸಾಧ್ಯವಿಲ್ಲವಾದರೆ ಮೃದುವಾಗಿ ಪ್ರೀತಿಯಿಂದ ನಿಮ್ಮ ನಿಸ್ಸಹಾಯಕತೆ ಸೂಚಿಸಿರಿ. ಅಥವಾ ನಿಮ್ಮ ಮೇಲಾಧಿಕಾರಿಗಳ ಬಳಿಗೆ ಅತಿಥಿಯನ್ನು ಕರೆದುಕೊಂಡು ಹೋಗಿ ಪ್ರಶ್ನೆಯನ್ನು ಪರಿಹರಿಸಿರಿ. ಕೆಲವು ಸಾರಿ ಈ ಕೆಲಸ ಬಹಳ ಕಷ್ಟಕರವಾಗುತ್ತದೆ. ಆದರೆ ಅಲ್ಲಾಹನ ಸಂಪ್ರೀತಿ ಗಳಿಸಲು ಈ ಕೆಲಸ ಮಾಡಬೇಕು. ನಿಮ್ಮ ಭಾವನೆಗಳನ್ನೂ ನಾಲಗೆಯನ್ನೂ ಹತೋಟಿಯಲ್ಲಿರಿಸಬೇಕು. ಇದೇ ರೀತಿ ಕಾರ್ಯಕರ್ತರು ಪರಸ್ಪರ ಸಹ ತಮ್ಮ ನಾಲಗೆಯನ್ನು ಮೃದುವಾಗಿರಿಸಿ ವರ್ತಿಸಬೇಕು. ಅಧಿಕಾರಿಗಳೂ ಮೇಲ್ವಿಚಾರಕರೂ ತಮ್ಮ ಸಹಾಯಕರೊಂದಿಗೆ ಮೃದುವಾಗಿ ಮಾತನಾಡಬೇಕು. ಯಾರಾದರೂ ತಪ್ಪು ಮಾಡಿದರೆ ಪ್ರೀತಿಯಿಂದ ಮನವರಿಕೆ ಮಾಡಿಕೊಡಿರಿ. ಈ ಸ್ವಯಂ ಸೇವಕರು ಸರ್ವಶಕ್ತನಾದ ಅಲ್ಲಾಹನ ಸಂಪ್ರೀತಿ ಗಳಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡಲು ಆಗಮಿಸಿದ್ದಾರೆ ಎನ್ನುವುದನ್ನು ಅಧಿಕಾರಿಗಳು ಸಹ ಮನವರಿಕೆ ಮಾಡಿಕೊಳ್ಳಬೇಕು. ಯಾವುದೇ ವಿಶಿಷ್ಟ ವಿಭಾಗದಲ್ಲಿ ಸೇವೆ ಮಾಡಲು ತರಬೇತಿ ಗಳಿಸಿಲ್ಲವಾದರೂ ಅತಿಥಿಗಳಿಗೆ ಸೇವೆ ಮಾಡುವ ನಿಸ್ವಾರ್ಥ ಭಾವನೆಯಿಂದ ಆಗಮಿಸಿರುವ ಈ ಸ್ವಯಂ ಸೇವಕರನ್ನು ಗೌರವ ಭಾವದಿಂದ ಕಾಣಬೇಕು. ಎಲ್ಲರೂ ಒಟ್ಟಿಗೆ ಸೇರಿ ಸೇವೆ ಮಾಡುವ ಸೌಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ಮತ್ತು ಅಧಿಕಾರಿಗಳು ಮತ್ತು ಸ್ವಯಂ ಸೇವಕರು ಸಹ ತ್ಯಾಗದ ಮನೋಭಾವದಿಂದ ಈ ಸೇವೆಯನ್ನು ಮಾಡಬೇಕು ಎಂದು ಅರಿತುಕೊಂಡಾಗ ಮಾತ್ರ ಈ ಮನೋಭಾವನೆ ಮೂಡುತ್ತದೆ. ಪ್ರವಾದಿ(ಸ) ಅವರು ಅತಿಥಿಯ ತಪ್ಪು ನಡವಳಿಕೆಗೆ ಸಹ

ಸೇವೆ ಮತ್ತು ತ್ಯಾಗದ ಮಾನದಂಡವನ್ನು ಸ್ಥಾಪಿಸಿದರು. ಇದರ ಬಗ್ಗೆ ಒಂದು ವರದಿ ಹೀಗಿದೆ: ಒಮ್ಮೆ ಓರ್ವ ಮುಸ್ಲಿಮೇತರ ಅತಿಥಿಯು ಆಗಮಿಸಿದಾಗ ಅವನಿಗಾಗಿ ರಾತ್ರಿಯ ಊಟದ ವ್ಯವಸ್ಥೆ ಮಾಡಲಾಗುತ್ತದೆ. ರಾತ್ರಿ ಮಲಗಲು ಹಾಸಿಗೆಯ ವ್ಯವಸ್ಥೆ ಮಾಡಲಾಗಿತ್ತು. ರಾತ್ರಿಯಲ್ಲಿ ಅತಿಯಾಗಿ ತಿಂದ ಅಥವಾ ಯಾವುದೋ ಕಾರಣದಿಂದ ಹೊಟ್ಟೆ ಉರಿಯುತ್ತಿದ್ದರಿಂದ ಅಥವಾ ಉದ್ದೇಶಪೂರ್ವಕವಾಗಿ ತೊಂದರೆ ನೀಡುವ ಕಾರಣದಿಂದ ಅವನು ತನ್ನ ಹಾಸಿಗೆಯನ್ನು ಗಲೀಜು ಮಾಡಿ ಬೆಳಿಗ್ಗೆ ಹೊರಟು ಹೋದನು. ರಸೂಲುಲ್ಲಾಹ್(ಸ)ರವರು ಈ ಕೃತ್ಯಕ್ಕಾಗಿ ಅವನನ್ನು ಟೀಕಿಸಲಿಲ್ಲ, ಆದರೆ ನೀರನ್ನು ತರಿಸಿ ಅದನ್ನು ಸ್ವತಃ ತೊಳೆಯಲು ಪ್ರಾರಂಭಿಸಿದರು. "ನೀವು ಏಕೆ ಸಂಕಟಪಡುತ್ತಿದ್ದೀರ ನಾವು ಸೇವಕರು ಹಾಜರಾಗಿದ್ದೇವೆ ನಾವು ಅದನ್ನು ಸ್ವಚ್ಛಗೊಳಿಸುತ್ತೇವೆ ಎಂದು ಸಹಾಬರವರು ಹೇಳಿದರು, ಅದಕ್ಕೆ ಪ್ರವಾದಿ(ಸ) ರವರು "ಅವನು ನನ್ನ ಅತಿಥಿಯಾಗಿದ್ದನು" ಹಾಗಾಗಿ ನಾನೇ ಈ ಕೆಲಸ ಮಾಡುತ್ತೇನೆ ಎಂದು ಹೇಳಿದರು. (ಮ'ಾಲ್ಫೂ'ಝಾತ್, ಸಂಪುಟ-5, ಪುಟ-295, 1984 ಆವೃತ್ತಿಯಿಂದ ಆಯ್ದುಕೊಳ್ಳಲಾಗಿದೆ) (ಮಸ್ನವಿ ಮೌಲವಿ ಮಾನ್ವಿ ದಫ್ತರ್ ಪಂಜಮ್, ಪುಟ-20-25)

ಪ್ರವಾದಿ(ಸ) ಹೇಳಿದರು: "ಯಾರು ಅಲ್ಲಾಹ್ ಮತ್ತು ಅಂತಿಮ ದಿನದಲ್ಲಿ ವಿಶ್ವಾಸ ಇರಿಸುತ್ತಾನೋ ಅವನು ತನ್ನ ಅತಿಥಿಯನ್ನು ಗೌರವಿಸುತ್ತಾನೆ."

(ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಅದಾಬ್, ಅಧ್ಯಾಯ ಮನ್ ಕಾನ್ ಯುಮಿನ್ ಬಿಲ್ಲಾಹ್..., ಹದೀಸ್-6018)

ಆದ್ದರಿಂದ, ಧರ್ಮದ ಉದ್ದೇಶಕ್ಕಾಗಿ ಬಂದ ಅತಿಥಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಅತಿಥಿಗಳಾಗಿರುವುದರಿಂದ ನಮ್ಮ ಎಲ್ಲಾ ಸ್ವಯಂಸೇವಕರು, ಸ್ವಯಂ ಸೇವತೀಯರು, ಕಾರ್ಮಿಕರು, ಅಧಿಕಾರಿಗಳು ಅಥವಾ ಸಹಾಯಕರ ಕರ್ತವ್ಯವಾಗಿದೆ. ತ್ಯಾಗ ಮಾಡುವ ಮೂಲಕ ಅವರ ಸೇವೆಯನ್ನೂ ನಾವು ಮಾಡುತ್ತೇವೆ ಎಂದು. ಎಲ್ಲಾ ಸಮಯದಲ್ಲೂ ಹೆಚ್ಚಿನ ನೈತಿಕತೆಯನ್ನು ತೋರಿಸಿ. ಮುಖದಲ್ಲಿ ಯಾವುದೇ ಅಸಮಾಧಾನವನ್ನು ತೋರಿಸದೆ ಲವಲವಿಕೆಯಿಂದ ಸೇವೆ ಮಾಡಿ. ಈ ಚೈತನ್ಯವು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ನಮ್ಮ ಅನೇಕ ಕಾರ್ಯಕರ್ತರಲ್ಲಿದೆ. ಎಲ್ಲಾ ಕಾರ್ಯಕರ್ತರು ಈ ಉತ್ಸಾಹದಲ್ಲಿ ಕೆಲಸ ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ವಿವಿಧ ಕ್ಷೇತ್ರಗಳಲ್ಲಿ ನೇಮಕಗೊಂಡ ಅಧಿಕಾರಿಗಳು ಸಹ ಅಲ್ಲಾಹನ ಅನುಗ್ರಹದಿಂದ ಸೇವೆ ಮಾಡುವ ಅವಕಾಶ ಸಿಗುತ್ತಿದೆ ಎಂಬುದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ವಿವಿಧ ವಿಭಾಗಗಳ ಅಧಿಕಾರಿಗಳಾಗಿ ನೇಮಿಸಲ್ಪಡುವ ಜನರು ಯಾವಾಗಲೂ ನೆನಪಿನಲ್ಲಿರಿಸಬೇಕು. ಅವರಿಗೆ ಸೇವೆ ಮಾಡುವ ಸಂದರ್ಭ ಅಲ್ಲಾಹನ ಅನುಗ್ರಹದಿಂದ ಲಭಿಸಿದೆ. ಅವರು ಅಧಿಕಾರಿಗಳಾಗಿ ಅಲ್ಲ, ಸೇವಕರಾಗಿ ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಬೇಕು. ಅವರು ತಮ್ಮ ಶ್ರೇಷ್ಠ ಸ್ವಭಾವಗುಣದ ಮಾದರಿಯನ್ನು ಪ್ರದರ್ಶಿಸಬೇಕು. ಆಗ ಅಧೀನರಾಗಿರುವವರೂ ಸಹಾಯಕರೂ ಉನ್ನತಮಟ್ಟದ ಸ್ವಭಾವಗುಣವನ್ನು ಪ್ರಕಟಿಸುವರು. ಅಲ್ಲಾಹನು ಎಲ್ಲರಿಗೂ ಆ ಭಾಗ್ಯವನ್ನು ಕರುಣಿಸಲಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅತಿಥಿಗಳೊಂದಿಗೆ ಉತ್ತಮವಾಗಿ ವರ್ತಿಸುವ ಬಗ್ಗೆ ಅನೇಕ ಸಂದರ್ಭಗಳಲ್ಲಿ ಉಪದೇಶಿಸಿದ್ದಾರೆ. ಒಂದು ಸಂದರ್ಭದಲ್ಲಿ ಹೀಗೆ ಹೇಳಿದರು: ನೋಡಿರಿ, ಬಹಳ ಅತಿಥಿಗಳು ಆಗಮಿಸಿದ್ದಾರೆ. ಅವರಲ್ಲಿ ಕೆಲವರ ಬಗ್ಗೆ ನಿಮಗೆ ಪರಿಚಯವಿದೆ. ಬೇರೆ ಕೆಲವರ ಪರಿಚಯ ನಿಮಗಿಲ್ಲ. ಆದುದರಿಂದ ನೀವು ಎಲ್ಲರನ್ನೂ ಗೌರವಾರ್ಹರೆಂದು ಗಣಿಸಿ ಅವರನ್ನೆಲ್ಲ ಸತ್ಕರಿಸಿರಿ. (ಮಲ್‌ಫೂಝಾತ್, ಸಂಪುಟ-6, ಪುಟ-226) ಈ ತತ್ವವನ್ನು ಯಾವಾಗಲೂ ಎಲ್ಲ ಕಾರ್ಯಕರ್ತರು ತಮ್ಮ ಮುಂದೆ ಇರಿಸಬೇಕು. ವಿಶಿಷ್ಟವಾಗಿ ಅತಿಥಿಗಳೊಂದಿಗೆ ನೇರವಾಗಿ ಸಂಬಂಧವಿರಿಸುವ ಅತಿಥಿ ಸತ್ಕಾರ ಮತ್ತು ಆಹಾರ ಸರಬರಾಜು ಮಾಡುವ ಕಾರ್ಯಕರ್ತರು ಬಹಳ ಬದ್ಧತೆಯಿಂದ ಈ ತತ್ವವನ್ನು ಪಾಲಿಸಬೇಕು.

ಈ ವರ್ಷ ಕೋವಿಡ್‌ನಿಂದಾಗಿ ಸಾಕಷ್ಟು ಮುನ್ನೆಚ್ಚರಿಕೆ ವಹಿಸಲಾಗುವುದು, ಆದ್ದರಿಂದ ವ್ಯವಸ್ಥೆ ಇರಬೇಕು ಮತ್ತು ಹೆಚ್ಚಿನ ಜನರು ಊಟದ ಸಮಯದಲ್ಲಿ ಹೆಚ್ಚು ಹೊತ್ತು ಕುಳಿತುಕೊಳ್ಳದೆ ಮತ್ತು ಊಟ ಮಾಡಿದ ನಂತರ ಬೇಗನೆ ಹೊರಡುವ ವ್ಯವಸ್ಥೆ ಮಾಡಲು ಈ ವಿಭಾಗವು ಪ್ರಯತ್ನಿಸಿದೆ ಎಂದು ನಾನು ಭಾವಿಸುತ್ತೇನೆ. ಹೊರಗೆ ಅತಿಥಿಗಳು ಸಹ ಈ ಬಗ್ಗೆ ಕಾಳಜಿ ವಹಿಸಬೇಕು ಮತ್ತು ವ್ಯವಸ್ಥೆಯೊಂದಿಗೆ ಸಹಕರಿಸಬೇಕು. ಸಾಮಾನ್ಯವಾಗಿ, ನಾನು ಹೇಳಿದಂತೆ, ಮಾಸ್ಕನ್ನು ಧರಿಸುವುದು ಕಡ್ಡಾಯವಾಗಿರಿಸಿಕೊಳ್ಳಿ ಅದೇ ರೀತಿ ತಿನ್ನುವಾಗ ಸಾಧ್ಯವಾದಷ್ಟು ಕಡಿಮೆ ಮಾತನಾಡಿ. ಸದ್ದಿಲ್ಲದೆ ತಿನ್ನಲು ಪ್ರಯತ್ನಿಸಿ ಮತ್ತು ಬೇಗನೆ ಹೊರಡಿ. ನಿಮ್ಮನ್ನು ಅಥವಾ ವ್ಯವಸ್ಥಾಪಕರನ್ನು ತೊಂದರೆಗೆ ಸಿಲುಕಿಸಬೇಡಿ.

ನಾನು ಕಾರ್ಯಕರ್ತರಿಗೆ ಕೆಲವು ಮೂಲಭೂತ ವಿಷಯಗಳನ್ನು ಹೇಳಿದ್ದೇನೆ ಮತ್ತು ಅತಿಥಿಗಳ ಸೇವೆಯತ್ತ ಗಮನ ಹರಿಸುವಂತೆ ಮಾಡಿದೆ.

ಈಗ ಅತಿಥಿಗಳು ಸಹ ಕೆಲವು ವಿಷಯಗಳನ್ನು ಕೇಳಿಸಿಕೊಳ್ಳಿ. ಅತಿಥಿಗಳು ತಮ್ಮ ಆತಿಥೇಯರ ಮೇಲೆ ಅಸಾಮಾನ್ಯ, ಅನಗತ್ಯ ಹೊರೆಯನ್ನು ಹೇರಬಾರದು ಎಂಬ ಇಸ್ಲಾಂ ಧರ್ಮದ ಬೋಧನೆಗಳನ್ನು ಅತಿಥಿಗಳು ಅರ್ಥಮಾಡಿಕೊಂಡರೆ ಮತ್ತು ಪಾಲಿಸಿದರೆ, ಪ್ರೀತಿ ಮತ್ತು ವಾತ್ಸಲ್ಯದ ವಾತಾವರಣವನ್ನು ಕಾಪಾಡಿಕೊಳ್ಳಲಾಗುತ್ತದೆ.

ಅತಿಥಿಗಳು ಅತಿಥೇಯರ ಮೇಲೆ ತಪ್ಪು ನಿರೀಕ್ಷೆಗಳು ಅಥವಾ ಅತಿಯಾದ ನಿರೀಕ್ಷೆಗಳನ್ನು ಇರಿಸಿದರೆ ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ಅತಿಥಿಗಳು ಸಹ ಹೆಚ್ಚು ನಿರೀಕ್ಷಿಸಬಾರದು. ಇಂತಹ ವಾತಾವರಣ ಸೃಷ್ಟಿಸಿದರೆ ಮಾತ್ರ ತಮ್ಮ ಕುಟುಂಬಸ್ಥರು ಸೌಲಭ್ಯದಲ್ಲಿರುತ್ತಾರೆ ಮತ್ತು ಅತಿಥಿಗಳ ಉಸ್ತುವಾರಿ ನೋಡಿಕೊಳ್ಳುವವರಿಗೂ ಸಹ ಸೌಲಭ್ಯವಾಗುತ್ತದೆ. ಆದ್ದರಿಂದ ಇದನ್ನು ಯಾವಾಗಲೂ ನೆನಪಿನಲ್ಲಿಡಿ. ಜಮಾಅತ್ತಿನ ವ್ಯವಸ್ಥೆಯ ಅಡಿಯಲ್ಲಿ ಉಳಿದಿರುವವರು ಈ ಕಾರ್ಯಕರ್ತರಿಗೆ ಕೃತಜ್ಞರಾಗಿರಬೇಕು, ಅವರ ಅಹ್ಮದಿ ಸಹೋದರರು ಮತ್ತು ಸಹೋದರಿಯರು ತಮ್ಮ ಉತ್ತಮ ಸ್ಥಾನಗಳ ಹೊರತಾಗಿಯೂ ಅತಿಥಿಗಳಿಗೆ ಸೇವೆ ಸಲ್ಲಿಸಲು ತಮ್ಮನ್ನು ತಾವು ಅರ್ಪಿಸಿಕೊಂಡಿದ್ದಾರೆ. ಕೆಲವೊಮ್ಮೆ ಊಟವು ಅತಿಥಿಯ ಮನಸ್ಥಿತಿಗೆ ಅನುಗುಣವಾಗಿರುವುದಿಲ್ಲ, ಆದರೆ ಈ ಜಮಾಅತ್‌ನ ಸಂಪ್ರದಾಯದ ಬಗ್ಗೆ ಪ್ರತಿಯೊಬ್ಬ ಅಹ್ಮದಿಗೂ ಅರಿವಿದೆ ಜಲ್ಸದ ದಿನಗಳಲ್ಲಿ ನಾವು ಸಾಮಾನ್ಯವಾಗಿ ಆಲೂಗಡ್ಡೆ, ಮಾಂಸ ಮತ್ತು ದಾಲ್ ಅನ್ನು ಬೇಯಿಸುತ್ತೇವೆ, ಆದ್ದರಿಂದ ಅತಿಥಿಗಳಿಗೆ ಅವರ ಮನಸ್ಥಿತಿಗೆ ಅನುಗುಣವಾಗಿ ಆಹಾರ ಸಿಗದಿದ್ದರೂ ಸಹ ಸಂತೋಷದಿಂದ ಸೇವಿಸಬೇಕು.

ಆತಿಥೇಯರು ನೀಡುವ ಯಾವುದೇ ಆಹಾರವನ್ನು ಅತಿಥಿಯು ಸಂತೋಷದಿಂದ ಸೇವಿಸಬೇಕು ಎಂದು ಪವಿತ್ರ ಪ್ರವಾದಿ(ಸ) ಹೇಳಿದ್ದಾರೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-5, ಪುಟ-204, ಹದೀಸ್-15048, ಆಲಿಮುಲ್ ಕುತುಬ್ ಬೈರೂತ್ 1998)

ಹಿಂದಿನ ವರ್ಷಗಳಲ್ಲಿ, ಯಾರಾದರೂ ಲಂಗರ್‌ನ ಆಹಾರವನ್ನು ತಿನ್ನಲು ಬಯಸದಿದ್ದರೆ, ಅವರು ತಾತ್ಕಾಲಿಕವಾಗಿ ಜಲ್ಸಾದ ಈ ಪ್ರದೇಶದಲ್ಲಿ ಸ್ಥಾಪಿಸಲಾದ ಮಾರುಕಟ್ಟೆಗೆ ಹೋಗಿ ಏನನ್ನಾದರೂ ತಿನ್ನುತ್ತಿದ್ದರು. ಆದರೆ ಈ ಬಾರಿ ಮಾರುಕಟ್ಟೆಯ ಸೌಲಭ್ಯ ಈ ರೀತಿ ಸಿಗದ ಕಾರಣ ಬೇರೆ ಬೇರೆ ಆಹಾರ ಪದ್ಧತಿ ಇರುವವರು ಖುಷಿಯಿಂದ ಸರ್ವಶಕ್ತನಾ ಅಲ್ಲಾಹನ ಸಂಪ್ರೀತಿಗಳಿಸಲಿಕ್ಕೆ ಸಂತೋಷದಿಂದ ಏನು ಸಿಗುತ್ತದೆಯೊ ಅದನ್ನು ತಿನ್ನಬೇಕು, ಆದರೆ ಝಿಯಾಫತ್‌ನವರಿಗೆ ನಾನು ಮತ್ತೊಮ್ಮೆ ಹೇಳುತ್ತೇನೆ: ಉತ್ತಮವಾದ ಆಹಾರವನ್ನು ತಯಾರಿಸಲು ಸಾಧ್ಯವಾದಷ್ಟು ಪ್ರಯತ್ನಿಸಿರಿ. ಈ ಮನೋಧರ್ಮವು ಕೆಲವೇ ಜನರಿರುತ್ತಾರೆ, ಆದರೆ ಅಂತಹ ಕೆಲವೇ ಜನರು ಕೆಲವೊಮ್ಮೆ ತೊಂದರೆಗೆ ಕಾರಣವಾಗುತ್ತಾರೆ. ಉತ್ತಮ ಸ್ವಭಾವಗುಣವನ್ನು ಪ್ರಕಟಿಸುವುದು ಕೇವಲ ಕಾರ್ಯಕರ್ತರ ಕೆಲಸವಲ್ಲ. ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬ ವ್ಯಕ್ತಿ ಸಹ ಉತ್ತಮ ಸ್ವಭಾವಗುಣಗಳನ್ನು ಪ್ರಕಟಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಲ್ಸದಲ್ಲಿ ಭಾಗವಹಿಸುವವರೊಂದಿಗೆ ಹೇಳಿದರು. (ಶಹದತ್ ಅಲ್-ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ-6, ಪುಟ-394)

ಒಳ್ಳೆಯ ಸ್ವಭಾವಗುಣವನ್ನು ಪ್ರಕಟಿಸಿರಿ. ಒಬ್ಬರಿನ್ನೊಬ್ಬರ ಬಗ್ಗೆ ಕಾಳಜಿ ಹೊಂದಿರಿ.

ಈ ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬನು ಈ ವಿಷಯವನ್ನು ತನ್ನ ದೃಷ್ಟಿಯಲ್ಲಿರಿಸಬೇಕು. ಅವನು ಈ ಜಲ್ಸದಲ್ಲಿ ಭಾಗವಹಿಸಿರುವುದು ತನ್ನ ಧಾರ್ಮಿಕ, ಜ್ಞಾನ ವರ್ಧಕ ಮತ್ತು ಆಧ್ಯಾತ್ಮಿಕ ದಾಹವನ್ನು ಶಮನ ಗೊಳಿಸಲಿಕ್ಕೋಸ್ಕರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ್ದಾರೆ: **ಯೇ ಜಲ್ಸ ಖಾಲಿಸತನ್ ಲಿಲ್ಲಾಹಿ ಜಲ್ಸ ಹೈ**. ಈ ಜಲ್ಸ ಅಲ್ಲಾಹನಿಗೋಸ್ಕರ ಮಾತ್ರ ಜರಗಿಸುವ ಜಲ್ಸ ಆಗಿದೆ. ಆದುದರಿಂದ ಚಿಕ್ಕಪುಟ್ಟ ವಿಷಯಗಳಿಗೆ ಸಂಬಂಧಿಸಿ ಯಾವುದೇ ರೀತಿಯಲ್ಲಿ ಆತಂಕ ಮತ್ತು ಸಿಟ್ಟು ಪ್ರಕಟಿಸಬಾರದು. ಕಾರ್ಯಕರ್ತರು ಸಹ ಮನುಷ್ಯರೇ ಆಗಿದ್ದಾರೆ. ಅವರು ಏನಾದರೂ ತಪ್ಪು ಮಾಡಿದರೆ ಅದನ್ನು ನಿರ್ಲಕ್ಷಿಸಬೇಕು. ಇದು ಒಬ್ಬರ ನೈತಿಕತೆಯನ್ನು ತಿದ್ದುವುದಕ್ಕೆ ಉತ್ತಮ ಮೂಲವಾಗಿದೆ. ಹೌದು, ಕೆಲವೊಮ್ಮೆ ಇಂತಹ ಸನ್ನಿವೇಶವೂ ನಿರ್ಮಾಣವಾಗುತ್ತದೆ ಕೆಲವೊಮ್ಮೆ ಅತಿಥಿಗಳಿಂದಲೂ ಸೃಷ್ಟಿಯಾಗುತ್ತದೆ, ಕಾರ್ಯಕರ್ತರಿಂದಲೂ ಆಗುತ್ತದೆ, ಸಿಟ್ಟು ಬರುವಂತಹ ವಾತಾವರಣವಿರುವುದು ನಿಜ. ಆದರೆ ಒಬ್ಬ ವ್ಯಕ್ತಿಯು ಇದನ್ನು ನಿರ್ಲಕ್ಷಿಸಿ ಆ ಸ್ಥಳವನ್ನು ತೊರೆದು ಅಲ್ಲಿಂದ ಹೋಗುವುದು ಉತ್ತಮ ನೈತಿಕತೆಯಾಗಿದೆ. ಕೆಲವೊಮ್ಮೆ ಯುವಜನರಲ್ಲಿ ಇಂತಹ ಪರಿಸ್ಥಿತಿ ಉದ್ಭವಿಸುತ್ತದೆ, ಆದ್ದರಿಂದ ನಾವು ಇಲ್ಲಿ ಒಟ್ಟುಗೂಡಿದ ಉದ್ದೇಶವು ಒಂದು ದೊಡ್ಡ ಉದ್ದೇಶವಾಗಿದೆ ಎಂದು ಯಾವಾಗಲೂ ನೆನಪಿನಲ್ಲಿಡಬೇಕು.

ಒಬ್ಬರ ಆಧ್ಯಾತ್ಮಿಕ ದಾಹವನ್ನು ತಣಿಸುವುದು ಗುರಿಯಾಗಿದೆ, ಒಬ್ಬರ ಧಾರ್ಮಿಕ ಜ್ಞಾನವನ್ನು ಹೆಚ್ಚಿಸುವುದು ಗುರಿಯಾಗಿದೆ, ಅಲ್ಲಾಹನ ಹಕ್ಕುಗಳನ್ನು ಮತ್ತು ದಾಸರ ಹಕ್ಕುಗಳನ್ನು ಹೇಗೆ ಈಡೇರಿಸಲು ಬೇಕಾದ ಮಾರ್ಗವನ್ನು ಕಲಿಯುವುದು ಗುರಿಯಾಗಿದೆ ಈ ಉದ್ದೇಶಗಳನ್ನು ಗಳಿಸುವುದಕ್ಕಾಗಿ ಕನಿಷ್ಠ ತಮ್ಮ ಭಾವನೆಗಳನ್ನು ತ್ಯಾಗ ಮಾಡಬೇಕಾಗುತ್ತದೆ ಇದಕ್ಕಾಗಿ ಅಲ್ಲಾಹನಿಂದ ದುಆ ಮೂಲಕ ಸಹಾಯವನ್ನು ಯಾಚಿಸಬೇಕು. ಈ ಭಾವೋದ್ರೇಕವು ಹೊರಹೊಮ್ಮಿದಾಗ, ನಾಲಿಗೆಗಳು ಅಲ್ಲಾಹನ ಸ್ಮರಣೆಯತ್ತ ಸೆಳೆಯಲ್ಪಟ್ಟಾಗ, ತೌಬ ಮತ್ತು ಇಸ್ತಿಗ್‌ಫಾರ್ (ಪಶ್ಚಾತ್ತಾಪ ಮತ್ತು ಕ್ಷಮೆ) ಕಡೆ ಗಮನಹರಿಸಿದಾಗ, ಯಾರಾದರೂ ನೋಯಿಸಿದರೂ ಸಹ, ಕ್ಷಮೆ ಮತ್ತು ನಿರ್ಲಕ್ಷದಿಂದ ವರ್ತಿಸಬಹುದು. ಆದ್ದರಿಂದ ಈ ದಿನಗಳಲ್ಲಿ ನಾವು ನಮ್ಮ ಮನೆಗಳನ್ನು ತೊರೆದು ಅಲ್ಲಾಹನಿಗಾಗಿ ಇಲ್ಲಿಗೆ ಪ್ರಯಾಣಿಸಿದ್ದೇವೆ ಎಂಬುದನ್ನು ಯಾವಾಗಲೂ ನೆನಪಿಸಿಕೊಳ್ಳಿ. ಒಂದು ಸಂದರ್ಭದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಹೀಗೆ ಪ್ರಾರ್ಥಿಸಿರಿ. ಹೇ ಅಲ್ಲಾಹ್, ನಾವು ನಿನ್ನಿಂದ ಈ ಪ್ರಯಾಣದಲ್ಲಿ ಒಳಿತನ್ನೂ ತಖ್ವವನ್ನೂ ಬೇಡಿಕೊಳ್ಳುತ್ತೇವೆ. ನಿನಗೆ ಇಷ್ಟಕರವಾದ ಒಳ್ಳೆಯ ಕೆಲಸಗಳನ್ನು ಮಾಡುವ ಸೌಭಾಗ್ಯವನ್ನು ನಮಗೆ ದಯಪಾಲಿಸು.
(ಸಹೀಹ್ ಮುಸ್ಲಿಂ, ಕಿತಾಬ್ ಅಲ್-ಹಜ್, ಅಧ್ಯಾಯ ಇಸ್ತಿಹ್‌ಬಾಬ್ ಅಲ್-ಝಿಕ್ರ್....... ಅಲ್-ಹದೀಸ್-3275)

ನಾವು ಈ ರೀತಿ ಪ್ರಾರ್ಥಿಸುತ್ತಿದ್ದರೆ ಸರ್ವಶಕ್ತನಾದ ಅಲ್ಲಾಹನು ನಮ್ಮ ಇಲ್ಲಿನ ವಾಸ್ತವ್ಯವನ್ನೂ ನಮ್ಮ ಪ್ರಯಾಣವನ್ನೂ ಅನುಗ್ರಹಗಳಿಂದ ತುಂಬಿಸುವನು. ಆದುದರಿಂದ ನೀವು ಈ ದಿನಗಳನ್ನು ಪ್ರಾರ್ಥನೆಗಳಿಂದಲೂ ದೇವಸ್ಮರಣೆಯಿಂದಲೂ ತುಂಬಿಸಲು ಪ್ರಯತ್ನಿಸಿರಿ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಗೆ ಪ್ರತಿಯೊಂದು ಸಂದರ್ಭದಲ್ಲಿ ಮಾಡಬೇಕಾದ ಪ್ರಾರ್ಥನೆಯನ್ನು ಕಲಿಸಿದ್ದಾರೆ. ಕೆಲವು ಜನರು ಜಲ್ಸದ ಅನುಗ್ರಹಗಳನ್ನು ಗಳಿಸಲು ತಮ್ಮ ಮನೆಗಳನ್ನು ಬಿಟ್ಟು ಬಂದಿದ್ದಾರೆ. ಅವರಿಗೆ ಅನಂತರ ತಮ್ಮ ಮನೆಯಲ್ಲಿರುವವರ ಬಗ್ಗೆ ಚಿಂತೆ ಇರಬಹುದು. ಅಂತಹ ಸಂದರ್ಭದಲ್ಲಿ ಈ ರೀತಿ ಪ್ರಾರ್ಥಿಸಬೇಕೆಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಹೇ ನಮ್ಮ ಅಲ್ಲಾಹ್, ಪ್ರಯಾಣದ ಕಷ್ಟಗಳಿಂದಲೂ ಅಸಹ್ಯವಾದ ಮತ್ತು ಗಾಬರಿ ಹುಟ್ಟಿಸುವ ದೃಶ್ಯಗಳನ್ನು ಕಾಣುವುದರಿಂದಲೂ ಸಂಪತ್ತು ಮತ್ತು ಕುಟುಂಬದವರಲ್ಲಿ ಉಂಟಾಗಬಹುದಾದ ಕೆಟ್ಟ ಪರಿಣಾಮಗಳಿಂದಲೂ ಅನಿಷ್ಟಕರವಾದ ಬದಲಾವಣೆಗಳಿಂದಲೂ ನಿನ್ನೊಡನೆ ಅಭಯವನ್ನು ಯಾಚಿಸುತ್ತೇನೆ.(ಸಹೀಹ್ ಮುಸ್ಲಿಮ್, ಕಿತಾಬುಲ್ ಹಜ್......, ಹದೀಸ್-3275)

ಇದು ಬಹಳ ಸಮಗ್ರವಾದ ಪ್ರಾರ್ಥನೆಯಾಗಿದೆ. ನಿಮ್ಮನ್ನು ಪ್ರಯಾಣದ ಕಾಲದಲ್ಲಿ ಪ್ರತಿಯೊಂದು ರೀತಿಯಲ್ಲಿ ಸುರಕ್ಷಿತರನ್ನಾಗಿ ಮಾಡಲು ಮತ್ತು ಮನೆಯಲ್ಲಿರುವವರು ಅಲ್ಲಾಹನ ಸಂರಕ್ಷಣೆಯಲ್ಲಿರುವಂತೆ ಮಾಡಲು ಬೇಡಿಕೊಳ್ಳುವ ಪ್ರಾರ್ಥನೆ ಇದಾಗಿದೆ. ಇಂತಹ ಯೋಚನೆ ಮತ್ತು ಇಂತಹ ಪ್ರಾರ್ಥನೆಗಳಿಂದ ನಾಲಗೆಗಳನ್ನು ತೇವಭರಿತವನ್ನಾಗಿ ಮಾಡುತ್ತಾ ಇಲ್ಲಿ ಪುರುಷರೂ ಮಹಿಳೆಯರೂ ತಿರುಗಾಡುತ್ತಾ ಇರುವುದಾದರೆ ಇಲ್ಲಿನ ಪರಿಸರ ಶಾಂತಿಭರಿತವಾಗುವುದಲ್ಲದೆ ಹೃದಯಗಳು ಸಾಂತ್ವನಗೊಳ್ಳುವ ಪರಿಸ್ಥಿತಿ ಸಹ ಸೃಷ್ಟಿಸಲ್ಪಡುವುದು. ಅಲ್ಲಾಹನು ಪ್ರತಿಯೊಂದು ಕೆಟ್ಟ ದೃಶ್ಯಗಳಿಂದ ನಮ್ಮನ್ನು ದೂರಸರಿಸುವನು.

ಇಂದಿನ ಕಾಲದಲ್ಲಿ ಕೋವಿಡ್ ಕಾರಣದಿಂದಲೂ ಚಿಂತೆ ಇದೆ. ಆದುದರಿಂದ ಪ್ರಾರ್ಥನೆಗಳ ಕಡೆಗೆ ಹೆಚ್ಚು ಶ್ರದ್ಧೆ ನೀಡಬೇಕಾಗಿದೆ. ಇತರ ಪ್ರಾರ್ಥನೆಗಳೊಂದಿಗೆ ಈ ದಿನಗಳಲ್ಲಿ ದುರೂದ್ ಪ್ರಾರ್ಥನೆ ಬಗ್ಗೆಯೂ ವಿಶಿಷ್ಟವಾಗಿ ಗಮನ ಹರಿಸಬೇಕಾಗಿದೆ.

ಅದೇ ರೀತಿ, ನಮಾಝ್‌ನ ಸಮಯದಲ್ಲಿ ನಮಾಝ್‌ಗೆ ಬನ್ನಿ. ಹೊರಗಡೆ ತಮ್ಮ ಸಮಯವನ್ನು ವ್ಯರ್ಥ ಮಾಡಬೇಡಿ. ಅಂತೆಯೇ, ಕರ್ತವ್ಯದಲ್ಲಿಲ್ಲದ ಕಾರ್ಯಕರ್ತರು ಪ್ರಾರ್ಥನೆಯ ಸಮಯದಲ್ಲಿ ಬಾಜಮಾಅತ್ ನಮಾಝನ್ನು ನಿರ್ವಹಿಸಲು ಪ್ರಯತ್ನಿಸಬೇಕು. ಅದೇ ರೀತಿ ಜಲ್ಸಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರೆಲ್ಲರೂ ಜಲ್ಸದ ಸಭಾಂಗಣದಲ್ಲಿ ಕುಳಿತು ಭಾಷಣಗಳನ್ನು ಕೇಳಲು ಪ್ರಯತ್ನಿಸಬೇಕು.

ಭಾಷಣಕಾರರು ಬಹಳ ಶ್ರಮದಿಂದ ಭಾಷಣಗಳನ್ನು ಸಿದ್ಧಪಡಿಸುತ್ತಾರೆ. ಅದರಿಂದ ಬೌದ್ಧಿಕ ಮತ್ತು ಆಧ್ಯಾತ್ಮಿಕ ಪ್ರಯೋಜನವಾಗುತ್ತದೆ. ಆದ್ದರಿಂದ ಯಾರು ಒಳ್ಳೆಯ ಭಾಷಣ ಮಾಡುತ್ತಿದ್ದಾರೆ, ಯಾರು ಉತ್ತಮ ಭಾಷಣಕಾರರು ಎಂದು ಮಾತ್ರ ನೋಡಬೇಡಿ. ಭಾಷಣದ ತಿರುಳನ್ನು ನೋಡಿರಿ ಮತ್ತು ಅದು ಎಷ್ಟು ಉಪಯುಕ್ತವಾಗಿದೆ ಎಂಬುದನ್ನು ಕಂಡುಕೊಳ್ಳಿ, ಸಾಮಾನ್ಯವಾಗಿ ಭಾಷಣಗಳು ಈ ಸಮಯದಲ್ಲಿ ಅಗತ್ಯವಿರುವ ವಿಷಯಗಳ ಮೇಲೆ ಇರುತ್ತವೆ ಮತ್ತು ಎಚ್ಚರಿಕೆಯಿಂದ ಆಲಿಸಿದರೆ ಮನಸ್ಸಿನಲ್ಲಿ ಉದ್ಭವಿಸುವ ಅನೇಕ ಪ್ರಶ್ನೆಗಳಿಗೆ ಉತ್ತರಗಳು ನಮಗೆ ದೊರಕುತ್ತದೆ.

ಆದ್ದರಿಂದ ಕುಳಿತು ಭಾಷಣಗಳನ್ನು ಬಹಳ ಎಚ್ಚರಿಕೆಯಿಂದ ಆಲಿಸಿ. ಈ ಬಾರಿ ನಾನು ಹೇಳಿದಂತೆ ಬಾಜಾರ್ ಇಲ್ಲ ಆದರೆ ಜಲ್ಸಾ ಕಾರ್ಯಕ್ರಮಗಳಲ್ಲಿ ವಿರಾಮದ ಸಮಯದಲ್ಲಿ ಪ್ರದರ್ಶಿಸಲಾದ ವಿವಿಧ ಪ್ರದರ್ಶನಗಳು, ಈ ಬಾರಿ ಸಣ್ಣ ಪ್ರಮಾಣದಲ್ಲಿವೆ, ಅಲ್ಲಿಗೆ ಹೋಗಿ ಅದನ್ನು ನೋಡಿ. ಅವುಗಳ ಲಾಭವನ್ನು ಪಡೆದುಕೊಳ್ಳಿ. ಇನ್‌ಶಾಅಲ್ಲಾಹ್ ಪರಿಸ್ಥಿತಿ ಸರಿಯಾಗಿದ್ದರೆ, ನಂತರ ಪ್ರದರ್ಶನಗಳು ಸಹ ವಿಸ್ತರಿಸುತ್ತವೆ ಮತ್ತು ಉಳಿದ ವ್ಯವಸ್ಥೆಯು ಸಹ ಅದೇ ರೀತಿಯಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ. ಈ ಬಾರಿ ಒಣಹವೆಯೂ ಇದೆ ಎಂಬುದನ್ನು ಗಮನಿಸಬೇಕು. ಮಳೆ ಬರಲಿಲ್ಲ. ಹಾಗಾಗಿ ಕಳೆದ ವರ್ಷದಂತೆ ವಾಹನ ನಿಲುಗಡೆಗೆ ಇಷ್ಟೊಂದು ತೊಂದರೆ ಆಗದಿರಲಿ ಎಂದು ಆಶಿಸುತ್ತೇನೆ. ಕಳೆದ ವರ್ಷ ಮಳೆಯಿಂದಾಗಿ ಸಾಕಷ್ಟು ತೊಂದರೆಯಾಗಿತ್ತು. ಹೇಗಾದರೂ, ಈ ವರ್ಷ ಉತ್ತಮ ವ್ಯವಸ್ಥೆ ಇದೆ. ಟ್ರ್ಯಾಕ್ ಇತ್ಯಾದಿಗಳ ನಿರ್ವಹಣೆಯನ್ನು ಸುಧಾರಿಸಲಾಗಿದೆ ಮತ್ತು ನಿಯಮಿತವಾಗಿ ನೀರಿನ ಒಳಚರಂಡಿಗಾಗಿ ತಜ್ಞರ ಸಹಾಯದಿಂದ ವ್ಯಾಪಕವಾದ ನೀರಿನ ಒಳಚರಂಡಿ ಕೆಲಸವನ್ನು ಮಾಡಲಾಗಿದೆ. ಕಳೆದ ತಿಂಗಳು ಸುರಿದ ಮಳೆಯಲ್ಲಿ ನೀರು ಹರಿದು ಹೋಗುತ್ತಿದ್ದ ರೀತಿ ನೋಡಿದರೆ ಮುಂದೆಯೂ ಸಹ ಇದರಿಂದ ಸಾಕಷ್ಟು ಅನುಕೂಲವಾಗಲಿದೆ ಇನ್‌ಶಾಅಲ್ಲಾಹ್. ಆದರೆ, ಈ ವರ್ಷ ಈ ದಿನಗಳಲ್ಲಿ ಒಣ ಹವೆಯ ಮುನ್ಸೂಚನೆ ಇದೆ, ಆದರೆ ಪಾರ್ಕಿಂಗ್ ಸ್ಥಳದಲ್ಲಿ ಹೆಚ್ಚಿನ ಕಾರುಗಳು ಇರುವುದರಿಂದ ವ್ಯವಸ್ಥಾಪಕರಿಗೂ ಸ್ವಲ್ಪ ತೊಂದರೆಯಾಗಿದೆ, ಆದರೆ ಕಾರುಗಳಿಂದ ಬರುವ ಜನರು ಸಹಕರಿಸಿದರೆ, ಇದೆಲ್ಲವೂ ಸುಲಭವಾಗಿ ನಿಯಂತ್ರಿಸಲ್ಪಡುತ್ತದೆ. ಆದ್ದರಿಂದ ಯಾವುದೇ ತೊಂದರೆಯಾಗದಂತೆ ತಾಳ್ಮೆ ಮತ್ತು ಧೈರ್ಯದಿಂದ ಕಾರುಗಳಲ್ಲಿ ಸಂಚಾರ ವ್ಯವಸ್ಥೆಗೆ ಸಹಕರಿಸಿ.

ಅದೇ ರೀತಿ ನಾನು ಪ್ರತಿ ವರ್ಷ ಹೇಳುವಂತೆ ಶೌಚಾಲಯ ಬಳಸುವವರು, ಸ್ನಾನಗೃಹ ಬಳಸುವವರೂ ಸ್ವಚ್ಛತೆಯ ಬಗ್ಗೆ ಕಾಳಜಿ ವಹಿಸಿ ಈ ವರ್ಷ ವಿಶೇಷವಾಗಿ ನೀರನ್ನು ವ್ಯರ್ಥಗೊಳಿಸಬೇಡಿ. ಕಡಿಮೆ ಮಳೆಯಾಗಿರುವುದರಿಂದ ಸರ್ಕಾರವೂ ಕಡಿಮೆ ನೀರು ಬಳಕೆಗೆ ಒತ್ತು ನೀಡಿದೆ. ನೀರನ್ನು ಎಚ್ಚರಿಕೆಯಿಂದ ಬಳಸಿ. ಹಾಗೆಯೇ ಇಲ್ಲಿ ಒಣ ಹುಲ್ಲಿಗೆ ಸುಲಭವಾಗಿ ಬೆಂಕಿ ಹತ್ತಿಕೊಳ್ಳುತ್ತದೆ. ಈ ಬಗ್ಗೆಯೂ ತುಂಬಾ ಜಾಗರೂಕರಾಗಿರಿ. ಯಾವುದೇ ರೀತಿಯ ಅಜಾಗರೂಕತೆಯು ತೊಂದರೆಗಳನ್ನು ಉಂಟುಮಾಡಬಹುದು. ತಮ್ಮನ್ನು ಅಥವಾ ನೆರೆಹೊರೆಯವರಿಗೆ ಹಾನಿಯಾಗಬಹುದು. ಸುರಕ್ಷತಾ ದೃಷ್ಟಿಯಿಂದಲೂ ಎಲ್ಲರೂ ಜಾಗರೂಕರಾಗಿರಬೇಕು. ಪರಿಸರದ ಮೇಲೆ ನಿಗಾ ಇರಿಸಿ. ಒಂದು ಚೀಲ ಅಥವಾ ಅಂತಹದ್ದೇನಾದರೂ ಬಿದ್ದಿರುವುದು ಕಂಡುಬರುತ್ತದೆ ಸಂದೇಹವಿದ್ದರೆ, ತಕ್ಷಣವೇ ವ್ಯವಸ್ಥಾಪಕರಿಗೆ ತಿಳಿಸಿ. ಕಾರ್ಡ್ ಅನ್ನು ಪರಿಶೀಲಿಸುವಾಗ, ವ್ಯವಸ್ಥೆ ಮತ್ತು ಸ್ಕ್ಯಾನಿಂಗ್ ಜನರು ಮಾಸ್ಕನ್ನು ತೆಗೆದು ಪ್ರತಿಯೊಬ್ಬ ವ್ಯಕ್ತಿಯ ಮಾಸ್ಕನ್ನು ನೋಡುತ್ತಾರೆ, ಅದು ಕಾರ್ಡ್ ಚಿತ್ರಕ್ಕೆ ಹೊಂದಿಕೆಯಾಗುತ್ತದೆಯೇ ಅಥವಾ ಇಲ್ಲವೇ ಎಂದು ಪರಿಶೀಲಿಸುತ್ತಾರೆ.

ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬರನ್ನು ಎಲ್ಲಾ ದುಷ್ಟರಿಂದಲೂ ರಕ್ಷಿಸಲಿ ಮತ್ತು ಆತನ ವಿಶೇಷ ಅನುಗ್ರಹವನ್ನು ಧಾರೆಯೆರೆಯಲಿ.

ನಂತರ ಮತ್ತೊಮ್ಮೆ ಹೇಳುತ್ತೇನೆ, ಈ ದಿನಗಳಲ್ಲಿ ಝಿಕ್ರೆ ಇಲಾಹಿ (ದೇವರ ಸ್ಮರಣೆ) ಮತ್ತು ಆರಾಧನೆಗೆ ವಿಶೇಷ ಗಮನ ನೀಡಿ. ಜಮಾಅತ್‌ನ ಪ್ರಗತಿಗಾಗಿ ಮತ್ತು ಶತ್ರುಗಳಿಂದ ಸುರಕ್ಷಿತವಾಗಿರಲು ಬಹಳಷ್ಟು ಪ್ರಾರ್ಥಿಸಿ. ಸೆರೆಮನೆಯ ಕಷ್ಟಗಳನ್ನು ಸಹಿಸುತ್ತಿರುವ ಬಂಧಿತರಿಗಾಗಿ (ಅಸೀರಾನೆ ರಾಹೆ ಮೌಲ) ಪ್ರಾರ್ಥಿಸಿ. ಅವರ ಆರಂಭಿಕ ಬಿಡುಗಡೆಗೆ ಅಲ್ಲಾಹನು ಮಾರ್ಗವನ್ನು ಸೃಷ್ಟಿಸಲಿ. ಜುಮುಅ ನಮಾಝಿನ ಸಮಯದಲ್ಲಿ ಮತ್ತು ಜುಮುಅದ ನಂತರ ಮತ್ತು ಉಳಿದ ದಿನಗಳಲ್ಲಿ ವಿಶೇಷ ಪ್ರಾರ್ಥನೆಗಳನ್ನು ಮಾಡುವುದನ್ನು ಮುಂದುವರಿಸಿ.

ಕೊನೆಯಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಜಲ್ಸದಲ್ಲಿ ಭಾಗವಹಿಸುವವರಿಗಾಗಿ ದುಆವಿನ ಪದಗಳನ್ನು ನೀಡುತ್ತೇನೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೊರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ

ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. ( ವ´ಂ ಜ್ ವ´ಂ ಊ ಅ ಇಶ್ತಿಹಾರಾತ್ ಸಂಪುಟ–1 ಪುಟ 341–342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)

ಜಲ್ಸದಲ್ಲಿ ಭಾಗವಹಿಸುವ ಪ್ರತಿಂಯೊಬ್ಬ ಪುರುಷನನ್ನೂ ಮಹಿಳೆಯನ್ನೂ ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳ ವಾರೀಸುದಾರರನ್ನಾಗಿ ಮಾಡಲಿ. ಆಮೀನ್

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

(ಅನ್ನಿಸಾ) ಅಂದರೆ ನಾವು ಪ್ರತಿಯೊಂದು ಸಮುದಾಯದಿಂದ ಒಬ್ಬೊಬ್ಬ ಸಾಕ್ಷಿಯನ್ನು ತಂದು, ಇವರಿಗೆ ಸಾಕ್ಷಿಯಾಗಿ ನಿನ್ನನ್ನೂ ತರುವಾಗ (ಇವರ) ಸ್ಥಿತಿ ಏನಾಗಿರಬಹುದು?....... ಅವಿಶ್ವಾಸವನ್ನು ಹೊಂದಿ ಪ್ರವಾದಿಯನ್ನು ಧಿಕ್ಕರಿಸಿದವರು ಆ ದಿನದಂದು, (ಅಲ್ಲಿ ಹಾಜರಾಗಲು ಸಂದರ್ಭ ಬಾರದೆ) ತಮ್ಮನ್ನು ಭೂಮಿಯಲ್ಲಿ ಹೂಳಿಟ್ಟು ನೆಲಸಮ ಮಾಡಿರುತ್ತಿದ್ದರೆ (ಎಷ್ಟು ಚೆನ್ನಾಗಿರುತಿತ್ತು!) ಎಂದು ಬಯಸುವರು. (ಅಂದು) ಅಲ್ಲಾಹನಿಂದ ಏನನ್ನೂ ಬಚ್ಚಿಡಲು ಅವರಿಗೆ ಸಾಧ್ಯವಿಲ್ಲ.

ಅಲ್ಲಾಹನು ಪ್ರತಿಯೊಂದು ಸಮೂದಾಯಕ್ಕೂ ಒಬ್ಬ ಪ್ರವಾದಿಯನ್ನು ಕಳುಹಿಸಿದ್ದಾನೆ ಎಂಬುದು ಈ ಆಯತ್‌ನಿಂದ ಸಾಬೀತು ಆಗುತ್ತದೆ. ಪವಿತ್ರ ಖುರ್‌ಆನ್ ಈ ನಂಬಿಕೆಯನ್ನು ವಿವಿಧ ಆಯತ್‌ಗಳಲ್ಲಿ ವಿವರಿಸಿದೆ ಮತ್ತು ಇದು ಎಲ್ಲಾ ಇತರ ಧರ್ಮಗಳಿಗಿಂತ ವಿಶಿಷ್ಟವಾಗಿದೆ ಮತ್ತು ಇದು ಅದರ ದೃಢೀಕರಣದ ಪ್ರಬಲ ಪುರಾವೆಗಳಲ್ಲಿ ಒಂದಾಗಿದೆ.

ಅಂದು ಅವಿಶ್ವಾಸಿಗಳಿಗೆ ಅನುಮತಿ ನೀಡಲಾಗುವುದಿಲ್ಲ ಎಂದು ಹೇಳಿದ್ದಕ್ಕೆ ಕೆಲವರು ಮಾತನಾಡಲು ಅನುಮತಿ ನೀಡುವುದಿಲ್ಲ ಎಂದು ಹೇಳಿದ್ದಾರೆ. ಈ ಅರ್ಥವು ಸರಿಯಲ್ಲ ಏಕೆಂದರೆ ಪವಿತ್ರ ಖುರ್‌ಆನ್‌ನ ಹಲವಾರು ಆಯತ್‌ಗಳ ಮೂಲಕ ಸತ್ಯವಿಶ್ವಾಸಿಗಳು ತೀರ್ಪಿನ ದಿನದಂದು ಸರ್ವಶಕ್ತನಾದ ಅಲ್ಲಾಹನೊಂದಿಗೆ ಮಾತನಾಡುತ್ತಾರೆ ಮತ್ತು ಅವರ ಕ್ಷಮೆಯನ್ನು ಸಹ ಮಂಡಿಸುತ್ತಾರೆ ಎಂದು ಸಾಬೀತಾಗಿದೆ. ಆದ್ದರಿಂದ **ಲಾ ಯುಝುನ** ಎಂದರೆ ಸ್ವರ್ಗಕ್ಕೆ ಪ್ರವೇಶಿಸಲು ಅನುಮತಿ ಅಥವಾ ಮಧ್ಯಸ್ಥಿಕೆ ಎಂದರ್ಥ ಮತ್ತು ಇದರರ್ಥ ಪ್ರವಾದಿಯವರು ತೀರ್ಪಿನ ದಿನದಂದು ಬಂದಾಗ ಅವರು ಸಂಪೂರ್ಣವಾಗಿ ಪರಿಪೂರ್ಣರಲ್ಲದ ತನ್ನ ಜನರ ಗಾಗಿ ಜನರಿಗೆ ಶಿಫಾಅತ್ ವಹಿಸಲು ಅನುಮತಿಸಲಾಗುವುದು, ಆದರೆ ಅವರು ಪ್ರವಾದಿಯನ್ನು ತನ್ನವರೆಂದು ಕರೆಯಲು ಸಾಧ್ಯವಾಗುತ್ತದೆ, ಆ ಸಮಯದಲ್ಲಿ, ಈ ಜನರು ಶಿಫಾಅತ್‌ನಿಂದ ವಂಚಿತರಾಗುತ್ತಾರೆ ಮತ್ತು ಅವರಿಗೆ ಶಿಫಾಅತ್‌ಅನ್ನು ಅನುಮತಿಸಲಾಗುವುದಿಲ್ಲ. ಪವಿತ್ರ ಖುರ್‌ಆನ್ ಮತ್ತು ಹದೀಸ್‌ನಿಂದ ಸಾಬೀತಾಗುವುದೇನೆಂದರೆ ಈ ಶೀಫಾಅತ್ ಅನುಮತಿಯ ಮೂಲಕ ನಡೆಯುತ್ತದೆ. ಪವಿತ್ರ ಖುರ್‌ಆನ್‌ನಲ್ಲಿ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, **ವಲಾ ತನ್‌ಫಉ ಶ್ಯಫಾಅತು ಇಂದಹೂಇಲ್ಲಾ ಲೆಮನ್ ಅಝಿನ ಲಹೂ** (ಸಬಾ: ರುಕು–3), ಅಂದರೆ, ಅಲ್ಲಾಹನು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶೀಫಾರಸೂ ಫಲಕಾರಿಯಾಗದು. ಸೂರಾ ಯೂನಸ್ ರುಕು 1, ತಾಹಾ ರುಕು 6 ಮತ್ತು ಅಲ್–ನಜ್ಮ್ ರುಕು 2 ಮತ್ತು ಸೂರಾ ಬಖರಃ ರುಕು 34 ರಲ್ಲಿ ಸಹ ಉಲ್ಲೇಖಿಸಲಾಗಿದೆ. ಹದೀಸ್‌ನಲ್ಲಿ ಶಿಫಾರಸ್ಸಿನ ಬಗ್ಗೆ ಇಝುನ್ ಎಂಬ ಪದ ಉಪಯೋಗಿಸಲಾಗಿದೆ. ಮುಸ್ನದ್ ಅಹ್ಮದ್ ಹನ್ಬಲ್, ಸಂಪುಟ 5, ಪುಟ 43 ರಲ್ಲಿ ಅಬುಬಕರ್ ಅವರ ವರದಿಯಲ್ಲಿ ಅವರು ಹೀಗೆ ಹೇಳುತ್ತಾರೆ: **ಸುಮ್ಮ ಯುಝುನು ಲಿಲ್‌ಮಲಾಇಕತಿ ವನ್ನಬೀಈನ ವಶ್ಶುಹದಾಇ ಅನ್ ಯಶ್‌ಫಉ**– ಅಂದರೆ ನಂತರ ಅಲ್ಲಾಹನು ದೇವದೂತರು, ಪ್ರವಾದಿಗಳು ಮತ್ತು ಹುತಾತ್ಮರಿಗೆ ಶಿಫಾರಸ್ಸು ಮಾಡಲು ಅನುಮತಿಸುತ್ತಾನೆ.

ಈ ಅನುಮತಿಯ ಇನ್ನೊಂದು ಅರ್ಥವನ್ನು ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾಗಿದೆ. ಇದು ಸೂರಾ ಅಲ್–ಮುರ್ಸಲಾತ್‌ನಲ್ಲಿದೆ, **ವಲಾ ಯುಝುನ ಲಹುಮ್ ಫಯಅ್‌ತಝಿರೂನ** ಅಂದರೆ ಅವಿಶ್ವಾಸಿಗಳಿಗೆ ಕ್ಷಮೆಯನ್ನು ಪ್ರಸ್ತಾಪಪಡಿಸಲು ಅನುಮತಿಯನ್ನು ನೀಡಲಾಗುವುದಿಲ್ಲ.

ಖಿಯಾಮತ್ ದಿನದಂದು ಪ್ರವಾದಿಗಳನ್ನು ಸಾಕ್ಷಿಗಳಾಗಿ ಪರಿಗಣಿಲಾಗುವುದು ಎಂದು ಹೇಳಲಾಗಿದೆ. ನನ್ನ ಅಭಿಪ್ರಾಯದಲ್ಲಿ ಪ್ರವಾದಿಗಳ ಸಾಕ್ಷಿ ಎಂದರೆ ಅವರ ಉದಾಹರಣೆಯಾಗಿದೆ, ಅವರು ಅವರ ಉದಾಹರಣೆಯನ್ನು ಪ್ರಸ್ತುತಪಡಿಸುತ್ತಾರೆ, ಅಲ್ಲಾಹನ ವಾಕ್ಯವು ನಮ್ಮ ಮೇಲೆ ಈ ಪರಿಣಾಮವನ್ನು ಬೀರುತ್ತದೆ. ಈ ಬೋಧನೆಯನ್ನು ಸ್ವೀಕರಿಸಿದ ಪರಿಣಾಮವಾಗಿ ನಾವು ಅಲ್ಲಾಹನನ್ನು ಕಂಡುಕೊಂಡೆವು ಮತ್ತು ಎಲ್ಲಿಂದ ಎಲ್ಲಿಗೆ ತಲುಪಿದೆವು. ಈ ರೀತಿಯಾಗಿ, ಸರ್ವಶಕ್ತನಾದ ಅಲ್ಲಾಹನು ಆ ಸಮಯದಲ್ಲಿ ಅವಿಶ್ವಾಸಿಗರನ್ನು ನಾಚಿಕೆ ಪಡಿಸುತ್ತಾನೆ, ನೋಡಿ ನಮ್ಮ ಈ ಪ್ರವಾದಿಯು ಈ ಆಧ್ಯಾತ್ಮಿಕ ಶಕ್ತಿಗಳನ್ನು ಪಡೆದು ಎಲ್ಲಿಂದ ಎಲ್ಲಿಗೆ ತಲುಪಿದನು ಆದರೆ ನೀವು ಆ ಶಕ್ತಿಗಳನ್ನು ನಿರಾಕರಿಸಿ ಎಲ್ಲಿಂದ ಎಲ್ಲಿಗೆ ತಲುಪಿದ್ದೀರಿ.

ಪ್ರತಿಯೊಬ್ಬ ಪ್ರವಾದಿಯು ದೈವಿಕ ಪದದ ಫಲಿತಾಂಶದ ಪ್ರಾಯೋಗಿಕ ಉದಾಹರಣೆಯಾಗಿದೆ, ಅದಕ್ಕಾಗಿಯೇ ಪ್ರವಾದಿಯಿಲ್ಲದೆ ಪದವು ಬರುವುದಿಲ್ಲ. ವಾಕ್ಯದ ಮಹಿಮೆಯು ಪ್ರವಾದಿಯಿಂದ ಮತ್ತು ಪ್ರವಾದಿಯ ಮಹಿಮೆಯು ಪದದಿಂದ ತಿಳಿಯುತ್ತದೆ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–214, ಪ್ರಕಟಿತ 2010 ಖಾದಿಯಾನ್)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 2.5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಷೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೆಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯುಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಷೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9866358609 (ವ್ಯವಸ್ಥಾಪಕರು)

# ಅಲ್ಲಾಹನು ಪವಿತ್ರ ಖುರ್‌ಆನ್‌ನ ರಕ್ಷಕನಾಗಿದ್ದಾನೆ.

**(ಪವಿತ್ರ ಖುರ್‌ಆನ್‌ನ 26 ವಚನಗಳ ಕುರಿತು ಎತ್ತಿದ ಆಕ್ಷೇಪದ ಉತ್ತರ)**

**ಮುಹಮ್ಮದ್ ಹಮೀದ್ ಕೌಸರ್,**
**ನಾಝಿರ್ ದಾವತ್ ಇಲಲ್ಲಾಹ್ ಉತ್ತರ ಭಾರತ, ಖಾದಿಯಾನ್.**

**(ಸಂಚಿಕೆ: 6)**

## ಅಹ್ಮದೀಯ ಜಮಾಅತ್‌ನ ನಂಬಿಕೆ ಹಾಗೂ ಜಿಹಾದ್:

ಹಝ್ರತ್ ಮುಹಮ್ಮದ್(ಸ) ಅವರು ಒಂದು ಭವಿಷ್ಯವಾಣಿಯೂ ಹೀಗೆ ನುಡಿದ್ದರು: ಅಂದರೆ ನಾನು ಉಮ್ಮತೆ ಮುಹಮ್ಮದೀಯದಲ್ಲಿ ಯಾವ ಮಸೀಹನ ಆಗಮನದ ಬಗ್ಗೆ ಸುವಾರ್ತೆಯನ್ನು ನೀಡುತ್ತೇನೆ ಎಂದರೆ ಅವನು **"ಮಿನ್‌ಕುಮ್"** ಮುಸ್ಲಿಮರಲ್ಲಿ ಒಬ್ಬ ವ್ಯಕ್ತಿಯಾಗಿರುತ್ತಾನೆ ಮತ್ತು ಅವನೇ ಇಮಾಮ್ ಮಹದಿಯೂ ಆಗಿರುವನು. ಪ್ರವಾದಿ(ಸ) ನುಡಿದರು **ವಲಾ ಅಲ್‌ಮಹದಿಯ್ಯು ಇಲ್ಲಾ ಈಸಾ ಇಬ್ನು ಮರ್‌ಯಮ** (ಸುನನ್ ಇಬ್ನೆ ಮಾಜ, ಕಿತಾಬುಲ್ ಫಿತನ್, ಬಾಬ್ ಶಿದ್ದತುಝ್ಝಮಾನ್) ಅಂದರೆ, ಮಹದಿಯನ್ನು ಹೊರತುಪಡಿಸಿ ಈಸ ಇಬ್ನ್ ಮರ್ಯಾಮ್ ಇಲ್ಲ, ಮತ್ತು ಪ್ರವಾದಿ(ಸ) ಅವರು ಮುಂಬರುವ ಮಸೀಹ್ ಮತ್ತು ಮಹದಿಯ ಬಗ್ಗೆ ಸುದ್ದಿ ನೀಡಿದ್ದಾರೆ ಅಂದರೆ ಅವರು ಜಿಝ್ಯವನ್ನು ತಡೆಗಟ್ಟುವನು. ಕೆಲವು ಹದೀಸ್‌ಗಳಲ್ಲಿ, ಜಿಝ್ಯಾ ಬದಲಿಗೆ **"ಅಲ್-ಹರ್ಬ್"** ಅನ್ನು ಸಹ ಬಳಸಲಾಗಿದೆ, ಅಂದರೆ ಜಿಹಾದ್ ಬಿಸ್ಸೈಫ್ ಅನ್ನು ತಡೆಹಿಡಿಯುತ್ತಾನೆ. **"ಜಿಹಾದ್"** ಎಂಬುದು ಅರೇಬಿಕ್ ಪದವಾಗಿದ್ದು ಅದು "ಜುಹ್ದ್" ಯಿಂದ ಮಾಡಲ್ಪಟ್ಟಿದೆ ಎಂಬುದು ಸ್ಪಷ್ಟವಾಗಿರಬೇಕು, ಅಂದರೆ ಕಠಿಣ ಪರಿಶ್ರಮ ಸಹಿಸಿಕೊಳ್ಳುವುದು ಮತ್ತು ಜಿಹಾದ್ ಎಂದರೆ ಏನನ್ನಾದರೂ ಮಾಡಲು ಶ್ರಮಿಸುವುದು ಮತ್ತು ಯಾವುದೇ ರೀತಿಯ ಕೊರತೆಯನ್ನು ಬಿಡಬಾರದು ನಾವು ಉರ್ದುವಿನಲ್ಲಿ ಜಿದ್ದೊ ದಿಹದ್ ಎಂದು ಹೇಳುತ್ತೇವೆ. ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳಲ್ಲಿ ಹಲವಾರು ರೀತಿಯ ಜಿಹಾದ್‌ಗಳನ್ನು ವಿವರಿಸಲಾಗಿದೆ. ಹದೀಸ್‌ನಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ:

ಅಂದರೆ: ಹಝ್ರತ್ ಜಾಬಿರ್(ರ) ಅವರು ವರದಿ ಮಾಡುತ್ತಾರೆ ಪ್ರವಾದಿ(ಸ)ರವರು ಒಂದು ಯುದ್ಧದಿಂದ ಹಿಂದಿರುಗುತ್ತಿರುವಾಗ ಯುದ್ಧದಿಂದ ಹಿಂದಿರುಗಿ ಬಂದ ಜನರನ್ನು ಉದ್ದೇಶಿ ಹೇಳಿದರು ನಿಮ್ಮ ಬರುವಿಕೆಯು ಬಹಳ ಉತ್ತಮವಾಗಿತ್ತು ಮತ್ತು ನೀವೆಲ್ಲರು ಜಿಹಾದೆ ಅಸ್‌ಗರ್‌ನಿಂದ (ಅಂದರೆ ಚಿಕ್ಕ ಜಿಹಾದ್‌ನಿಂದ) ಜಿಹಾದೆ ಅಕ್ಬರ್‌ನ ಕಡೆಗೆ ಬಂದಿರುವಿರಿ ಆಗ ಸಹಾಬರವರು ಪ್ರಶ್ನಿಸಿದರು: ಯಾ ರಸೂಲಲ್ಲಾಹ್!! ಜಿಹಾದೆ ಅಕ್ಬರ್ ಅಂದರೆ ಏನು? ಆಗ ಪ್ರವಾದಿ(ಸ) ಉತ್ತರಿಸಿದರು: ದಾಸರ ತಮ್ಮ ಇಚ್ಛೆಗಳ ವಿರುದ್ಧ ಜಿಹಾದ್ ಮಾಡುವುದು. (ತಾರೀಖ್ ಬಗ್‌ದಾದ್, ಝಿಕರ್ ಮಿನ್ ಇಸ್ಮುಹೂ ಹಾರೂನ್, ಭಾಗ-6, ಪುಟ-171)

ಮೊದಲ ದರ್ಜೆಯ ಜಿಹಾದ್ ಎಂದರೆ ಒಬ್ಬ ವ್ಯಕ್ತಿಯು ತನ್ನ (ನಫ್ಸ್) ವಿರುದ್ಧವಾಗಿ ಮಾಡುತ್ತಾನೆ. ಇಸ್ಲಾಂನಲ್ಲಿ ಮಹತ್ತರವಾದ ಜಿಹಾದ್ ಎಂದರೆ ಒಬ್ಬ ವ್ಯಕ್ತಿಯು ತನ್ನನ್ನು ಪಾಪಗಳಿಂದ ರಕ್ಷಿಸಿಕೊಳ್ಳುವುದು, ಸದಾಚಾರ ಮತ್ತು ಒಳ್ಳೆಯ ಕಾರ್ಯಗಳನ್ನು ಮಾಡುವುದು, ಮತ್ತು ಒಬ್ಬ ಮುಸಲ್ಮಾನನು ತನ್ನನ್ನು ತಾನು ಶುದ್ಧೀಕರಿಸಿಕೊಂಡು ಪ್ರಾಯೋಗಿಕವಾದಾಗ, ಅವನಿಗೆ ಎರಡನೇ ಹಂತದ ಜಿಹಾದ್ (ಜಿಹಾದ್ ಕಬೀರ್) ಮಾಡಲು ಆದೇಶಿಸಲಾಗುತ್ತದೆ. ಅಲ್ಲಾಹನು ಹೇಳಿದಂತೆ: **ಜಾಹಿದ್‌ಹುಮ್ ಬಿಹೀ ಜಿಹಾದನ್ ಕಬೀರ** (ಸೂರಃ ಅಲ್‌ಫುರ್ಖಾನ್, ಆಯತ್ 53) ಅಂದರೆ: ಅವರೊಂದಿಗೆ ದೊಡ್ಡ ಜಿಹಾದ್‌ನೊಂದಿಗೆ ಹೋರಾಡಿರಿ. ಹೀಗೆ ಅವರು ಇತರರಿಗೆ ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಪ್ರೀತಿಯಿಂದ ಮತ್ತು ಪುರಾವೆಗಳೊಂದಿಗೆ ತಿಳಿಸಿರಿ. ಅಹ್ಮದೀಯ ಸಮುದಾಯದ ಹೆಚ್ಚಿನ ಸದಸ್ಯರು ಅಲ್ಲಾಹನ ಅನುಗ್ರಹದಿಂದ ಹಗಲು ರಾತ್ರಿ ಜಿಹಾದ್ ಕಬೀರ್‌ನಲ್ಲಿ ತೊಡಗಿದ್ದಾರೆ, ಮೂರನೇ ಹಂತದ ಜಿಹಾದ್ ಅನ್ನು ಚಿಕ್ಕ ಜಿಹಾದ್ (ಜಿಹಾದ್ ಅಸ್ಗರ್) ಎಂದು ಕರೆಯಲಾಗುತ್ತದೆ. **ರಬ್ಬುನಲ್ಲಾಹ್** ಎಂದು ಹೇಳುವುದಕ್ಕಾಗಿ ಮುಸ್ಲಿಮರು ತುಳಿತಕ್ಕೊಳಗಾದಾಗ ಮಾತ್ರ ಇದನ್ನು ಮಾಡಲು ಅನುಮತಿ ಇದೆ. ಮತ್ತು ಅಂತಹ ಪರಿಸ್ಥಿತಿಯಲ್ಲಿ, ಮುಸ್ಲಿಮರು ಒಂದು ಸಣ್ಣ ಜಿಹಾದ್ ಮಾಡಿದರೆ, ಆಗ ಅಲ್ಲಾಹನಿಂದ ಒಂದು ವಾಗ್ದಾನವಿದೆ **ವ ಇನ್ನಲ್ಲಾಹ ಅಲಾ ನಸ್ರಿಹಿಮ್ ಲಖದೀರು** (ಸೂರಃ ಅಲ್‌ಹಜ್: ಆಯತ್ 40) ಖಂಡಿತವಾಗಿಯೂ ಅಲ್ಲಾಹನು ಅವರನ್ನು ಸಹಾಯ ಮಾಡಲು ಸಂಪೂರ್ಣ ಶಕ್ತಿ ಹೊಂದಿರುವನು. ಪ್ರಸ್ತುತ ಕಾಲದ ಮುಸ್ಲಿಮರು ಮತ್ತು ಅವರ ಮೌಲವಿಗಳು ಜಿಹಾದ್ ಜಿಹಾದ್ ಎಂದು ಘೋಷಣೆಗಳನ್ನು ಕೂಗಿ ಅಮಾಯಕ ಮುಸ್ಲಿಮರನ್ನು ಕೊಲ್ಲುತ್ತಾರೆ ಮತ್ತು ಕೊಲ್ಲಲ್ಪಡಿಸುತ್ತಾರೆ ಪವಿತ್ರ ಖುರ್‌ಆನ್ ಬೋಧಿಸುವ ಜಿಹಾದ್‌ಗೂ ಇವರು ಬೋಧಿಸುವ ಜಿಹಾದ್‌ಗೂ ಯಾವುದೇ ದೂರದ ಸಂಬಂಧವೂ ಇಲ್ಲ. ಒಂದು ವೇಳೆ ಇದು ಖುರ್‌ಆನ್‌ನ ಜಿಹಾದ್ ಆಗಿದ್ದರೆ, ಖಂಡಿತವಾಗಿಯೂ ಅಲ್ಲಾಹನು ತನ್ನ ವಾಗ್ದಾನದ ಪ್ರಕಾರ ಅವರಿಗೆ ಪ್ರಭುತ್ವವನ್ನು ನೀಡುತ್ತಿದ್ದನು. ಕಳೆದ ನೂರು ವರ್ಷಗಳಲ್ಲಿ ಪ್ರತಿಯೊಂದು ಕ್ಷೇತ್ರದಲ್ಲೂ ಅವರ ಸೋಲು ಮತ್ತು ಅವಮಾನವನ್ನು ಅನುಭವಿಸುತ್ತಿರುವುದು ಪವಿತ್ರ ಖುರ್‌ಆನ್‌ನ ಜಿಹಾದ್ ಅಲ್ಲ ಎಂಬುದಕ್ಕೆ ಅಲ್ಲಾಹನಿಂದ ಸ್ಪಷ್ಟವಾದ ಸೂಚನೆಯಾಗಿದೆ. ಆದರೆ ಇದು ಅದೇ ಆಗಿದ್ದಿದ್ದರೆ ಖಂಡಿತವಾಗಿಯೂ ಅವರಿಗೆ ವಿಜಯ ಲಭಿಸುತ್ತಿತ್ತು. ಅದೇ ರೀತಿ ಹಝ್ರತ್ ಮುಹಮ್ಮದ್ ಮುಸ್ತಫಾ (ಸ) ರವರ ಸ್ಪಷ್ಟವಾಗಿ ಹೇಳಿದ್ದಾರೆ: ಒಬ್ಬ ಮುಸ್ಲಿಂ ಮತ್ತು ವಿಶ್ವಾಸಿಯು ಯಾರು ಎಂದರೆ ಅವನ ನಾಲಿಗೆ ಮತ್ತು ಕೈಗಳಿಂದ ಜನರ ಪ್ರಾಣ ಮತ್ತು ಆಸ್ತಿಯನ್ನು ಸುರಕ್ಷಿತವಾಗಿರಿಸುತ್ತದೆ. ಇಂದು ಮುಸಲ್ಮಾನರೆಂದು ಕರೆದುಕೊಳ್ಳುವವರ ಕೈಯಿಂದ ಅಮಾಯಕರು ಬಲಿಯಾಗುತ್ತಿದ್ದರೆ, ಪ್ರವಾದಿ(ಸ.ಅ)ರವರ ಈ ಹೇಳಿಕೆಯು ಅರ್ಥವೇನೆಂದು ಅವರೇ ಹೇಳಬೇಕು. ಇದರಿಂದ ಸಾಬೀತಾಗುವುದೇನೆಂದರೆ ಪ್ರವಾದಿ(ಸ) ರವರ ಹದೀಸ್‌ನ ಪ್ರಕಾರ ಮುಸ್ಲಿಮರು ಮತ್ತು ವಿಶ್ವಾಸಿಗಳು ಇದನ್ನು ಮಾಡುವುದಿಲ್ಲ. ಯಾರಾದರೂ ಹೀಗೆ ಮಾಡಿದರೆ, ಅವರು ಇಸ್ಲಾಂ ವಿರೋಧಿ ಶಕ್ತಿಗಳ ಆಜ್ಞೆಯ ಮೇರೆಗೆ ಇಸ್ಲಾಂ ಮತ್ತು ನಿಜವಾದ ಮುಸ್ಲಿಮರನ್ನು ದೂಷಿಸಲು ಅದನ್ನು ಮಾಡುತ್ತಿರಬೇಕು. ಕಳೆದ ಶತಮಾನದಲ್ಲಿ, ಪ್ರಪಂಚದ ಕೆಲವು ದೇಶಗಳು ಮತ್ತು ಪ್ರದೇಶಗಳಲ್ಲಿ ಯಾಜೂಜ್ ಮಾಜೂಜ್ ಹಾಗೂ ದಜ್ಜಾಲ್‌ನ ರಾಜಕೀಯ ಮತ್ತು ಮುಸ್ಲಿಮರ ತಪ್ಪುಗಳ ಪರಿಣಾಮವಾಗಿ, ಮುಸ್ಲಿಮರು ಇತರ ರಾಷ್ಟ್ರಗಳೊಂದಿಗೆ ಹೋರಾಡುತ್ತಿದ್ದಾರೆ ಮತ್ತು ಈ ಪ್ರಕ್ರಿಯೆಯು ಇನ್ನೂ ನಡೆಯುತ್ತಿದೆ. ಈ ಎಲ್ಲಾ ರಾಜಕೀಯ ಕದನಗಳು ಜಗಳ ಮತ್ತು ಕೊಲೆಗಳು ಎಂಬುದು ಸ್ಪಷ್ಟವಾಗಿರಲಿ. ಅವರಿಗೆ ಇಸ್ಲಾಂ ಮತ್ತು ಪವಿತ್ರ ಖುರ್‌ಆನ್‌ಗೆ ಯಾವುದೇ ಸಂಬಂಧವಿಲ್ಲ. ಮತ್ತು ಯಾರಾದರೂ ಅವರನ್ನು ಇಸ್ಲಾಂನ ಕಡೆಗೆ ಸೂಚಿಸಿದರೆ ಅವನು ಗಂಭೀರವಾದ ತಪ್ಪಾಗಿ ಭಾವಿಸುತ್ತಿದ್ದಾನೆ. ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ ಅಂದರೆ ಇಸ್ಲಾಮಿನ ಶಾಂತಿಯುತ ಬೋಧನೆಗಳ ಹೊರತಾಗಿಯೂ ಮುಸ್ಲಿಮರಲ್ಲಿ ಜಿಹಾದ್ ಎಂಬ ತಪ್ಪು ಪರಿಕಲ್ಪನೆಯು ಎಲ್ಲಿಂದ ಹುದುಗಿದೆ? ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿದರೆ, ಈ ಪ್ರಶ್ನೆಗೆ ಉತ್ತರವು ಸುಲಭವಾಗಿ ಕಂಡುಬರುತ್ತದೆ. ಇಸ್ಲಾಂನ ಆರಂಭಿಕ ಶತಮಾನಗಳಲ್ಲಿ ಇಸ್ಲಾಂನ ಅಸಾಮಾನ್ಯ ಬೆಳವಣಿಗೆಗಳನ್ನು ನೋಡಿ, ಇಸ್ಲಾಂನ ಶತ್ರುಗಳು ಇಸ್ಲಾಂ ವಿರುದ್ಧ ಹೋರಾಡುವುದು ಇನ್ನು ಮುಂದೆ ನಮ್ಮ ಕೆಲಸವಲ್ಲ ಎಂದು ಅರ್ಥಮಾಡಿಕೊಂಡರು. ಮತ್ತೊಂದೆಡೆ, ಅವರು ಇಸ್ಲಾಂ ಧರ್ಮವನ್ನು ನಾಶಮಾಡಲು ಮತ್ತು ವಿಫಲಗೊಳಿಸಲು ಮತ್ತು ಅಪಖ್ಯಾತಿ ಮಾಡಲು ಬಯಸಿದ್ದರು. ಆದ್ದರಿಂದ ಅವರು ಮುಸ್ಲಿಮರೊಂದಿಗೆ ಸೇರಿಕೊಂಡರು ಮತ್ತು ಮುಸ್ಲಿಮರಲ್ಲಿ ಕೆಲವು ತಪ್ಪು ನಂಬಿಕೆಗಳನ್ನು ಹರಡಲು ಪ್ರಾರಂಭಿಸಿದರು.

ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ತೌರಾತ್ ಮತ್ತು ಇಂಜೀಲಿನಲ್ಲಿ ಅತ್ಯಂತ ಆಕ್ರಮಣಕಾರಿ ಮತ್ತು ಕ್ರೂರ ಬೋಧನೆಗಳನ್ನು ನೀಡಿರುವುದನ್ನು ನೋಡಿದಾಗ ಮತ್ತು ಇದಕ್ಕೆ ವಿರುದ್ಧವಾಗಿ, ಪವಿತ್ರ ಖುರ್‌ಆನ್‌ನಲ್ಲಿ ಅತ್ಯಂತ ಸಮತೋಲಿತ ಮತ್ತು ಶಾಂತಿಯುತ ಬೋಧನೆಗಳನ್ನು ನೀಡಲಾಗಿರುವುದು ನೋಡಿದಾಗ, ಅವರು **"ಜಿಹಾದ್"** ಎಂಬ ಪದದ ತಪ್ಪು ವ್ಯಾಖ್ಯಾನವನ್ನು ಮುಸ್ಲಿಮರಲ್ಲಿ ಹರಡಿಸಿದರು. ಮತ್ತೊಂದೆಡೆ, ನೀಚ ಮನೋಭಾವದ ಮುಸ್ಲಿಂ ರಾಜರನ್ನು ತಮ್ಮ ರಾಜ್ಯಗಳ ವಿಸ್ತರಣೆಗಾಗಿ ಜಿಹಾದ್‌ನ ತಪ್ಪು ವ್ಯಾಖ್ಯಾನದ ಅಗತ್ಯವಿತ್ತು, ಆದ್ದರಿಂದ ಅವರು ತಮ್ಮ ಕಾಲದ ವಿದ್ವಾಂಸರಿಂದ ತಪ್ಪು ವ್ಯಾಖ್ಯಾನವನ್ನು ಜನಪ್ರಿಯಗೊಳಿಸಿದರು ಮತ್ತು ಫಲಿತಾಂಶವೆಂದರೆ ಇಂದು ಜಿಹಾದ್‌ನ ತಪ್ಪು ವ್ಯಾಖ್ಯಾನ ಇಸ್ಲಾಂ ಧರ್ಮದ ಬಗ್ಗೆ ಅನೇಕ ತಪ್ಪು ತಿಳುವಳಿಕೆಗಳನ್ನು ಮೂಲ ವ್ಯಾಖ್ಯಾನವೆಂದು ಪರಿಗಣಿಸಿ ಸೃಷ್ಟಿಸಲಾಗಿದೆ. ಈ ತಪ್ಪು ತಿಳುವಳಿಕೆ ಮತ್ತು ಈ ರೀತಿಯ ಇತರ ಅನೇಕ ತಪ್ಪು ತಿಳುವಳಿಕೆಗಳನ್ನು ಸರಿಪಡಿಸಲು, ಸರ್ವಶಕ್ತನಾದ ಅಲ್ಲಾಹನು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಖಾದಿಯಾನಿ ಅಲೈಹಿಸ್ಸಲಾಮ್ ಅವರನ್ನು ವಾಗ್ದತ್ತ ಮೆಸ್ಸಿಹ್ ಮತ್ತು ಇಮಾಮ್ ಮಹದಿಯಾಗಿ ಕಳುಹಿಸಿದನು. ಮತ್ತು ಅವರು ಹೀಗೆ ಘೋಷಿಸಿದರು:

"ಇಂದಿನಿಂದ ಖಡ್ಗದಿಂದ ನಡೆದ ಮಾನವ ಜಿಹಾದ್ ಅನ್ನು ಅಲ್ಲಾಹನ ಆಜ್ಞೆಯೊಂದಿಗೆ ತಡೆಯಲಾಗಿದೆ. ಈಗ ಇದರ ನಂತರ, ಯಾರು ನಾಸ್ತಿಕನ ವಿರುದ್ಧ ಖಡ್ಗ ಹಿಡಿಯುತ್ತಾನೋ ಮತ್ತು ಅವನು ತನ್ನ ಹೆಸರು ಘಾಝಿ ಎಂದು ಇರಿಸುತ್ತಾನೋ ಅವನು ಪ್ರವಾದಿ(ಸ)ರವರಿಗೆ ಅವಿಧೇಯನಾಗಿರುತ್ತಾನೆ. ಅದರ ಬಗ್ಗೆ ಇಂದಿನಿಂದ ಒಂದು ಸಾವಿರದ ಮುನ್ನೂರು ವರ್ಷಗಳ ಮುಂಚೆಯೇ ವಾಗ್ದಾತ್ತ ಮಸೀಹನು ಆಗಮಿಸಿದಾಗ

ಎಲ್ಲಾ ಖಡ್ಗದ ಜಿಹಾದ್‌ಗಳು ಕೊನೆಗೊಳ್ಳುತ್ತವೆ ಎಂದು ಭವಿಷ್ಯವಾಣಿಯನ್ನು ನುಡಿದಿದ್ದಾರೆ. ಆದ್ದರಿಂದ ಈಗ ನನ್ನ ಆಗಮನದ ನಂತರ ಖಡ್ಗದ ಯಾವುದೇ ಜಿಹಾದ್ ಇಲ್ಲ. ಈಗ ನಮ್ಮಿಂದ ಶಾಂತಿ ಮತ್ತು ನೆಮ್ಮದಿಯ ಬಿಳಿ ಧ್ವಜವನ್ನು ಎತ್ತಲಾಗಿದೆ. ಸರ್ವಶಕ್ತನಾದ ಅಲ್ಲಾಹನನ್ನು ಆಹ್ವಾನಿಸಲು ಯಾವುದೇ ಮಾರ್ಗವಿಲ್ಲ. ಆದ್ದರಿಂದ, ಅಜ್ಞಾನಿಗಳು ಆಕ್ಷೇಪಿಸಿದ ಮಾರ್ಗವನ್ನು, ಸರ್ವಶಕ್ತನಾದ ಅಲ್ಲಾಹನ ಬುದ್ಧಿವಂತಿಕೆ ಮತ್ತು ಅನುಕೂಲತೆಯು ಮತ್ತೆ ಅದೇ ಮಾರ್ಗವನ್ನು ಅಳವಡಿಸಿಕೊಳ್ಳುವುದನ್ನು ಬಯಸುವುದಿಲ್ಲ. ಇದಕ್ಕೊಂದು ಉದಾಹರಣೆ ಎಂದರೆ ಈ ಹಿಂದೆ ಯಾವ ಚಿಹ್ನೆಗಳನ್ನು ನಿರಾಕರಿಸಲಾದೆಯೊ ಅವುಗಳನ್ನು ನಮ್ಮ ಪ್ರವಾದಿ ಸಯ್ಯಿದುನಾ ರಸೂಲುಲ್ಲಾಹ್ (ಸಲ್ಲಲ್ಲಾಹು ಅಲೈಹಿ ವಸಲ್ಲಮ್) ಅವರಿಗೆ ನೀಡಲಾಗಿಲ್ಲ." (ರೂಹಾನಿ ಖಝಾಇನ್, ಸಂಪುಟ–16, ಪುಟ–28)

**ವಲ್‌ಲಮು ಇನ್ನಲ್ ವಖ್ತ ಜಿಹಾದುಲ್ ಖಲ್ಮಿ ವದ್ದುಆಇ ವ ಆಯಾತೆ ಉಝ್ಮ** (ಹಖೀಖತುಲ್ ಮಹದಿ, ರೂಹಾನಿ ಖಝಾಇನ್, ಸಂಪುಟ–14, ಪುಟ–457) ಅಂದರೆ ನೆನಪಿಡಿ ಈಗ ಖಡ್ಗದ ಜಿಹಾದ್ ನಡೆಯುವುದಿಲ್ಲ ಬದಲಿಗೆ ಖಲಮ್ (ಪೆನ್ನು, ಬರವಣಿಗೆ) ಮತ್ತು ದುಆ ಮತ್ತು ದೊಡ್ಡ ಚಿಹ್ನೆಗಳೊಂದಿಗೆ ಜಿಹಾದ್ ಮಾಡುವ ಸಮಯವಾಗಿದೆ.

ಇಲ್ಲಿ ಇನ್ನೊಂದು ವಿಷಯವನ್ನು ಸಂಕ್ಷಿಪ್ತವಾಗಿ ಹೇಳುವುದು ಮುಖ್ಯವಾಗಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಭಯೋತ್ಪಾದನೆಯ ಘಟನೆ ನಡೆದರೆ, ನಮ್ಮ ದೇಶದ ಮತ್ತು ಪ್ರಪಂಚದ ಕೆಲವು ಪತ್ರಿಕೆಗಳು ಮತ್ತು ಪ್ರಸಾರ ಸಂಸ್ಥೆಗಳು ಅದನ್ನು ಇಸ್ಲಾಮಿಕ್ ಭಯೋತ್ಪಾದನೆ ಎಂದು ಕರೆಯುವುದು ಇತ್ತೀಚಿನ ದಿನಗಳಲ್ಲಿ ಫ್ಯಾಶನ್ ಆಗಿದೆ. ಇಂತಹ ಪತ್ರಿಕೆಗಳ ಬಗ್ಗೆ ಆಶ್ಚರ್ಯವಾಗುತ್ತದೆ, ಇತರ ಧರ್ಮದವರು ಇದೇ ರೀತಿಯ ಕಾರ್ಯಗಳನ್ನು ಮಾಡಿದರೆ, ಅವರು ತಮ್ಮ ಕಾರ್ಯಗಳನ್ನು ತಮ್ಮ ಧರ್ಮಕ್ಕೆ ಆರೋಪಿಸುವುದಿಲ್ಲ. ಉದಾಹರಣೆಗೆ, ಯುನೈಟೆಡ್ ಸ್ಟೇಟ್ಸ್ ಹಿರೋಷಿಮಾ ಮತ್ತು ನಾಗಾಸಾಕಿಯ ಮೇಲೆ ಪರಮಾಣು ಬಾಂಬುಗಳನ್ನು ಬೀಳಿಸಿದರೆ ಅಥವಾ ಯುನೈಟೆಡ್ ಸ್ಟೇಟ್ಸ್ ಮತ್ತು ಬ್ರಿಟನ್ ಅಫ್ಘಾನಿಸ್ತಾನ ಮತ್ತು ಇರಾಕ್ ಮೇಲೆ ಬಾಂಬ್ ಹಾಕಿದರೆ, ಈ ಕ್ರಿಯೆಯನ್ನು ಕ್ರಿಶ್ಚಿಯನ್ ಭಯೋತ್ಪಾದನೆ ಎಂದು ಕರೆಯಲಾಗುವುದಿಲ್ಲ. ಜನರಲ್ ಡಯರ್ ಜಲಿಯನ್ ವಾಲಾಬಾಗ್ ನಲ್ಲಿ ನೂರಾರು ಭಾರತೀಯರನ್ನು ಗುಂಡುಗಳಿಂದ ಕೊಂದಿದ್ದರೆ ಅದನ್ನು ಕ್ರಿಶ್ಚಿಯನ್ ಭಯೋತ್ಪಾದನೆ ಎಂದೂ ಕರೆಯುತ್ತಿರಲಿಲ್ಲ.

ಆದ್ದರಿಂದ ಈ ವಿವರಣೆಯ ನಂತರ, ಕೆಲವು ಅನಕ್ಷರಸ್ತ ಮುಸ್ಲಿಮರು ತಮ್ಮ ಅಜ್ಞಾನದಿಂದ ಅಥವಾ ಯಾರೋ ಇಸ್ಲಾಮಿಗೆ ಪ್ರಚೋದನೆಯಿಂದ ಮಾಡಿದ ಹತ್ಯೆಗಳನ್ನು ಆರೋಪಿಸುವುದು ಸೂಕ್ತವಲ್ಲ.

ಜಮಾಅತ್ ಅಹ್ಮದಿಯಾ ಮುಸ್ಲಿಮಾದಿಂದ ಜಿಹಾದ್ ಕುರಿತು ಈ ಸ್ಪಷ್ಟೀಕರಣದೊಂದಿಗೆ, ಅರ್ಜಿದಾರನು ತನ್ನ ಅರ್ಜಿಯಲ್ಲಿ ಸಲ್ಲಿಸಿದ ಆಯತ್‌ಗಳ ವಿವರಣೆಯನ್ನು ಪ್ರಸ್ತುತಪಡಿಸಲಾಗುತ್ತಿದೆ.

**(ಮುಂದುವರಿಯುವುದು)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಕೆಲಸವಾಗಿದೆ. ನಕ್ಕರೆ ಅವರ ಶೈಲಿ, ನೂರಾರು ದೃಷ್ಟಾಂತಗಳು ಸೂರ್ಯನ ಹಾಗೆ ಹೊಳೆಯುತ್ತಿವೆ. ಆದರೂ ಅವರ ದೃಷ್ಟಿಯಲ್ಲಿ ಇಲ್ಲಿಯವರೆಗೆ ಯಾವ ದೃಷ್ಟಾಂತಗಳು ಗೋಚರಿಸಲಿಲ್ಲ. (ಅದೇ ಪುಟ 121).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅವರು ಅಬ್ದುಲ್ಲ ಆಥಮನ ಭವಿಷ್ಯವಾಣಿ ಕುರಿತು ವಿವರವಾಗಿ ವರ್ಣಿಸಿದರು ಮತ್ತು ಹೇಳಿದರು. ಅದೊಂದು ಸಶರ್ತ ಭವಿಷ್ಯವಾಣಿ ಆಗಿತ್ತು. ಮತ್ತದು ಅದರ ಶರತ್ತಿನ ಪ್ರಕಾರ ಪೂರ್ಣಗೊಂಡಿದೆ. ಮತ್ತು ಅವರು ಲೇಖರಾಮನ ಭವಿಷ್ಯವಾಣಿಯನ್ನು ಉಲ್ಲೇಖಿಸಿ ಹೇಳಿದರು. ಅದರ ಕುರಿತು ಸ್ವಯಂ ಹಿಂದೂಗಳು ಸಾಕ್ಷಿ ನುಡಿದರು. ಈ ಭವಿಷ್ಯವಾಣಿ ಸ್ಪಷ್ಟ ರೂಪದಲ್ಲಿ ಪೂರ್ಣಗೊಂಡಿದೆ ಎಂದು. ಅವರು ಹೇಳಿದರು. ಹಝ್ರತ್ ಈಸಾ(ಅ) ಅವರ ಭವಿಷ್ಯವಾಣಿಗಳ ಮೇಲೆಯೂ ಸಹ ಯಹೂದ್ಯರು ಇದೇ ರೀತಿಯ ಆರೋಪಗಳನ್ನು ಮಾಡುತ್ತಾರೆ. ಯಾವ ರೀತಿ ಯಹೂದಿ ಗುಣಗಳುಳ್ಳ ಈ ಮುಸ್ಲಿಂ ಉಲಮಾ ನನ್ನನ್ನು ಭವಿಷ್ಯವಾಣಿಗಳ ಮೇಲೆ ಆರೋಪಗಳನ್ನು ಮಾಡುತ್ತಿದ್ದಾರೆ. ಅಂದಹಾಗೆ ಅವರು ಯಹೂದಿಯರ, ಹಝ್ರತ್ ಮಸೀಹ್‌ರ ಬಗ್ಗೆಗಿನ ಭವಿಷ್ಯವಾಣಿಗಳ ಆರೋಪಗಳನ್ನು ಪ್ರಸ್ತುತಪಡಿಸಿ ಹೇಳಿದರು. ಯಾವ ಮೌಲ್ವಿ ಮತ್ತು ಕ್ರೈಸ್ತ ಪಾದರಿಯಲ್ಲಿ ಆ ಆರೋಪಗಳಿಗೆ ಉತ್ತರ ನೀಡುವ ಶಕ್ತಿ ಇದೆಯೇ? ಅವರು ಹೇಳಿದರು. ನನ್ನ ಭವಿಷ್ಯವಾಣಿಯ ಸೋಲಂತೂ ವಾಸ್ತವದಲ್ಲಿ ಯಾವ ಆಕ್ಷೇಪವು ಸರಿಹೊಂದುವುದಿಲ್ಲ, ಯಾರಿಗಾದರೂ ಆಕ್ಷೇಪವಿದ್ದರೆ ಅಥವಾ ಸಂಶಯವಿದ್ದರೆ ನಾನು ಅವರ ಸಂಶಯಗಳನ್ನು ದೂರ ಮಾಡಲು ಮತ್ತು ಎಲ್ಲಾ ರೀತಿಯಿಂದ ಅವರಿಗೆ ಸಹಕರಿಸಲು ಸದಾಕಾಲಕ್ಕೂ ಸಿದ್ಧನಿದ್ದೇನೆ. ಅಂದಮೇಲೆ ಇದು ನ್ಯಾಯವಾದೀತೇ? ಹಝ್ರತ್ ಮಸೀಹ್(ಅ) ಅವರ ಭವಿಷ್ಯವಾಣಿಗಳ ಮೇಲೆ ಕಠಿಣವಾದ ಆರೋಪಗಳು ಬರುತ್ತವೆ. ಅದರ ಉತ್ತರ ಮುಸಲ್ಮಾನ್ ಉಲಮಾಗಳಿಂದಲೂ ಸಾಧ್ಯವಿಲ್ಲ. ಮತ್ತು ಕ್ರೈಸ್ತ ಪಾದರಿಗಳಿಂದಲೂ ಸಾಧ್ಯವಿಲ್ಲ. ಅವರು ಅಲ್ಲಾಹನ ಪ್ರಿಯವಾದ ಸಂದೇಶವಾಹಕರಷ್ಟೇ ಅಲ್ಲ. ದೇವನ ಸ್ಥಾನವು ಕೊಡಲಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಅವರ ಭವಿಷ್ಯವಾಣಿಗಳ ಮೇಲೆ ಯಾವ ಆರೋಪವು ಸಿದ್ಧಗೊಳ್ಳುವುದಿಲ್ಲ. ಅವರ ಭವಿಷ್ಯವಾಣಿಗಳು ಎಂತಹ ಮಹೋನ್ನತ ಮತ್ತು ಆದರ್ಶವಾಗಿದೆ ಎಂದರೆ ಅದರ ಉದಾಹರಣೆ ಗತಿಸಿಹೋದ ಪ್ರವಾದಿಗಳಲ್ಲಿ ಹುಡುಕಾಡಿದರೂ, ಹಝ್ರತ್ ರಸೂಲುಲ್ಲಾಹ್(ಸ) ಅವರ ಹೊರತಾಗಿ ದೊರೆಯುವುದು ಅತೀ ವಿರಳ. ಅವರನ್ನು ಈ ಯಹೂದಿ ಗುಣಗಳುಳ್ಳ ಮುಸಲ್ಮಾನ ಉಲಮಾಅಗಳು ಕಾಫಿರ್ ಎಂದು ಹೇಳುತ್ತಾರೆ. ನವೂಝುಬಿಲ್ಲಾಹ್ ಮಿನ್ ಝಾಲಿಕ್. ಹಾಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ), ಮುಹಮ್ಮದ್ ಹುಸೇನ್ ಬಟೌಲ್ವಿ ಮತ್ತು ಸನಾವುಲ್ಲಾಹ್ ಅಮೃತ್ಸರಿ ಮತ್ತು ಕ್ರೈಸ್ತ ಪಾದರಿಗಳಿಗೆ ಸವಾಲು ಹಾಕಿದರು. ಒಂದು ವೇಳೆ ಅವರು ಹಝ್ರತ್ ಮಸೀಹರ ಭವಿಷ್ಯವಾಣಿಗಳ ಮೇಲೆ ಯಹೂದಿಯರೂ ಮಾಡಿದಂತಹ ಆರೋಪಗಳಿಗೆ ಉತ್ತರ ನೀಡಿದರೆ ನಾನು ಅವರಿಗೆ ಒಂದು ನೂರು ರೂಪಾಯಿಗಳ ಬಹುಮಾನ ನೀಡುವೆನು. ಅವರ ಈ ವೈಭವಯುತ ಬಹುಮಾನದ ಸವಾಲು ನಾವು ಈ ಕೆಳಗೆ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಹೇಳಿದರು.

**ಹಝ್ರತ್ ಮಸೀಹ್ ನಾಸಿರಿ ಅವರ ಮೇಲೆ ಒಬ್ಬ ಯಹೂದಿಯ ಕಠಿಣವಾದ ಆರೋಪಗಳು**

"ಒಬ್ಬ ಯಹೂದಿಯ ಗ್ರಂಥ ರಚನೆಯಾಗಿದೆ ಅದು ನನ್ನ ಬಳಿಯಿದೆ. ಅದರಲ್ಲಿ ಮುಹಮ್ಮದ್ ಹುಸೇನ್ ಅಥವಾ ಸನಾವುಲ್ಲರವರ ಗ್ರಂಥದಂತೆ ಪುಸ್ತಕದಲ್ಲಿ ಬರೆಯುತ್ತಾನೆ. ಈಸಾ(ಅ) ರವರಿಂದ ಒಂದು ಪವಾಡ ಸಹ ತೋರಿಸಲು ಸಾಧ್ಯವಾಗಲಿಲ್ಲ. ಮತ್ತು ಅವರ ಯಾವುದೇ ಭವಿಷ್ಯವಾಣಿ ಸತ್ಯವಾಗಲಿಲ್ಲ. ಅವನು ಹೇಳುತ್ತಿದ್ದ. ದಾವೂದನ ಪಟ್ಟ ತನಗೆ ದೊರೆಯುವುದು, ಎಲ್ಲಿ ದೊರೆಯಿತು? ಅವರು ಹೇಳುತ್ತಿದ್ದ. ಹನ್ನೆರಡು ಹವಾರಿ (ಶಿಷ್ಯಂದಿರು) ಸ್ವರ್ಗದಲ್ಲಿ ಹನ್ನೆರಡು ಸಿಂಹಾಸನ ಪಡೆಯುವರು. ಆ ಹನ್ನೆರಡು ಹವಾರಿಗಳಿಗೆ ಎಲ್ಲಿ ಸಿಂಹಾಸನ ದೊರೆತಿದೆ? ಯಹೂದ ಸ್ಕ್ರಿಮೂತಿ ಮೂವತ್ತು ರೂಪಾಯಿ ಪಡೆದುಕೊಂಡು ಅವರಿಂದ ಬೇರ್ಪಟ್ಟನು ಮತ್ತು ಹವಾರಿಗಳಿಂದ ಪ್ರತ್ಯೇಕಗೊಂಡನು. ಪತ್ರಪನು ಮೂರು ಸಲ ಶಾಪ ಹಾಕಿದನು. ಅವನೇನು ಸಿಂಹಾಸನಕ್ಕೆ ಅರ್ಹನೇ? ಮತ್ತು ಹೇಳುತ್ತಿದ್ದ. ಈ ಕಾಲಘಟ್ಟದ ಜನರು ಇನ್ನೂ ಮರಣ ಹೊಂದಲಿಕ್ಕಿಲ್ಲ. ನಾನು ಮರಳಿ ಬರುವೆನು, ಎಲ್ಲಿ ಮರಳಿ ಬಂದ? ಮತ್ತು ಈ ಯಹೂದಿ ಬರೆಯುತ್ತಾನೆ. ಈ ವ್ಯಕ್ತಿ ಸುಳ್ಳುಗಾರನಾಗಲು ಇಷ್ಟೇ ಸಾಕು. ಮಲಾಕಿ ನಬಿಯ ಗ್ರಂಥದಲ್ಲಿ ನಮಗೆ ಸುವಾರ್ತೆ ನೀಡಲಾಗಿತ್ತು. ಯಹೂದಿಯರಲ್ಲಿ ಸತ್ಯವಂತನಾದ ಮಸೀಹನು ಬರುವವನಾಗಿದ್ದನು. ಅವರು ಇಲ್ಯಾಸ್ ನಬಿ ಲೋಕದಲ್ಲಿ ಪುನರಾಗಮನ ಆಗುವವರೆಗೆ ಬರಲು ಸಾಧ್ಯವಿಲ್ಲ. ಹಾಗೆ ಇಲ್ಯಾಸ್ ನಬಿ ಆಕಾಶದಿಂದ ಬಂದರೇ? ಮತ್ತು ಇಲ್ಲಿ ಅವನು ಬೊಬ್ಬೆ ಹಾಕುವನು, ಮತ್ತು ಜನರ ಮುಂದೆ ಹೇಳುವನು. ನೋಡಿರಿ ಮಲಾಕಿ ನಬಿಯ ಗ್ರಂಥದಲ್ಲಿ ಭವಿಷ್ಯವಾಣಿ ಆಗಿತ್ತು. ಸ್ವಯಂ ಇಲ್ಯಾಸರು ಲೋಕಕ್ಕೆ ಪುನರಾಗಮಿಸುವರು. ಈ ವ್ಯಕ್ತಿ ಯೋಹನ್ನನು (ಅವರು ಮುಸಲ್ಮಾನರಲ್ಲಿ ಯಾಹ್ಯಾ ಹೆಸರಿನಿಂದ ಕರೆಯಲ್ಪಡುತ್ತಾರೆ) ಇಲ್ಯಾಸ್ ಎಂದು ಹೇಳುತ್ತಾರೆ. ಅಂದರೆ ಅವರ ಸಾದೃಶ್ಯರೂಪ ಎನ್ನುತ್ತಾನೆ. ಆದರೆ ಅಲ್ಲಾಹನು ನಮಗೆ ಸಾದೃಶ್ಯ ರೂಪದ ಸುದ್ದಿ ನೀಡಿರಲಿಲ್ಲ, ಅವನಂತೂ ಸ್ಪಷ್ಟರೂಪದಲ್ಲಿ ಹೇಳಿದ್ದನು. ಸ್ವಯಂ ಇಲ್ಯಾಸ್ ಪುನರಾಗಮಿಸುವರು, ನಾವು ಅಂತ್ಯ ತೀರ್ಮಾನ ದಿನದಂದು ಕೇಳಲ್ಪಟ್ಟರೂ ಅದೇ ಗ್ರಂಥ ಅಲ್ಲಾಹನ ಮುಂದೆ ಪ್ರಸ್ತುತಪಡಿಸುವೆವು ವಾಗ್ದತ್ತ ಮಸೀಹರು ಬರುವ ಮುಂಚೆ ಇಲ್ಯಾಸನ ಸಾದೃಶ್ಯರೂಪ ಬರುವುದು ಎಂದು ನಾನು ಎಲ್ಲಿ ಬರೆದಿದ್ದೆ ಇವೆಲ್ಲ ಬರಹಗಳ ನಂತರವು ಹಝ್ರತ್ ಮಸೀಹರ ಬಗ್ಗೆ ಕಠಿಣ ರೀತಿಯ ಭಾಷೆ ಬಳಸಿರುವನು. ಗ್ರಂಥ ಬೇಕಾದರೆ ಇದೆ, ಬಯಸಿದವರು ನೋಡಬಹುದು.

**ಒಂದು ನೂರು ರೂಪಾಯಿಗಳ ಬಹುಮಾನದ ಸವಾಲು ಮೌಲ್ವಿ ಮುಹಮ್ಮದ್ ಹುಸೇನ್ ಮತ್ತು ಮಿಯಾ ಸನಾವುಲ್ಲಾ ಅವರ ಆರೋಪಗಳು ವಾಗ್ದತ್ತ ಮಸೀಹರ ಮೇಲೆ ಹಯೂದಿಯರಂತೆಯೇ ಇವೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಈಗ ಹೇಳಿರಿ ಆ ಯಹೂದಿ ಮತ್ತು ಮೌಲ್ವಿ ಮುಹಮ್ಮದ್ ಹುಸೇನ್ ಹಾಗೂ ಮಿಯಾ ಸನಾವುಲ್ಲಾ ಅವರ ಹೃದಯಗಳು, ಅವನಂತೆಯೇ ಆಗಿವೆ ಅಥವ ಇಲ್ಲವೆ, ನನ್ನ ಯಾವುದೇ ಭವಿಷ್ಯವಾಣಿ ಇರಲಿ ಅದರ ವಿರುದ್ಧ ಎಷ್ಟೆಲ್ಲ ಸುಳ್ಳನ್ನು ಹೇಳುತ್ತಾರೆ. ಅದಾಗ್ಯೂ ಒಂದು ಭವಿಷ್ಯವಾಣಿಯೂ ಸಹ ಸುಳ್ಳಾಗಲಿಲ್ಲ. ಬದಲು ಎಲ್ಲ ಭವಿಷ್ಯವಾಣಿಗಳು ಸ್ಪಷ್ಟರೂಪದಲ್ಲಿ ಪೂರ್ಣಗೊಂಡಿವೆ. ಸಂಪೂರ್ಣ ಭವಿಷ್ಯವಾಣಿಗಳು ಶರತ್ತಿನ ಪ್ರಕಾರವೇ ಪೂರ್ಣಗೊಂಡಿವೆ. ಮತ್ತು ಪೂರ್ಣಗೊಳ್ಳುವವು ಮತ್ತು ಯಾವ ಭವಿಷ್ಯವಾಣಿಗಳು ಶರತ್ತುಗಳನ್ನು ಹೊಂದಿರಲಿಲ್ಲ.

ಉದಾಹರಣೆಗೆ ಲೇಖರಾಮನ ಬಗ್ಗೆಯ ಭವಿಷ್ಯವಾಣಿ ಅದೇ ರೀತಿಯಲ್ಲಿ ಪೂರ್ಣಗೊಂಡಿದೆ. ಇದು ನನ್ನ ಭವಿಷ್ಯವಾಣಿಗಳ ವಾಸ್ತವವಾಗಿದೆ ಆದರೆ ಆ ಯಹೂದಿ ಪಂಡಿತನು ಹಝ್ರತ್ ಈಸಾ(ಅ) ರವರ ಭವಿಷ್ಯವಾಣಿಗಳ ಮೇಲೆ ಯಾವ ರೀತಿಯು ಆರೋಪಗಳನ್ನು ಮಾಡುತ್ತಿರುವನೋ ಅವು ಅತ್ಯಂತ ಕಠಿಣ ರೀತಿಯದ್ದಾಗಿವೆ. ಎಷ್ಟೊಂದು ಕಠಿಣವಾಗಿವೆ ಎಂದರೆ ಅದಕ್ಕೆ ನಮಗೂ ಸಹ ಉತ್ತರ ನೀಡಲು ಬರುವುದಿಲ್ಲ. **ಮೌಲ್ವಿ ಸನಾವುಲ್ಲಾ ಅಥವಾ ಮೌಲ್ವಿ ಮುಹಮ್ಮದ್ ಹುಸೇನ್ ಅಥವಾ ಪಾದರಿ ಸಾಹೇಬರುಗಳಲ್ಲಿ ಯಾರಾದರೂ ಆ ಆರೋಪಗಳಿಗೆ ಉತ್ತರ ನೀಡಬಹುದಾದರೆ ನಾವು ಅವರಿಗೆ ಒಂದು ನೂರು ರೂಪಾಯಿ ನಗದು ಬಹುಮಾನ ಅವರಿಗೆ ಒಪ್ಪಿಸುವೆವು** ದೇವನೆಂದು ಎನಿಸಿಕೊಂಡವನ ಭವಿಷ್ಯವಾಣಿಗಳ ಅವಸ್ಥೆ ಇದುವೇ ಅದರ ಮೇಲೆ ನಮಗೂ ಆಶ್ಚರ್ಯವಿದೆ. (ಅದೇ ಪುಟ 110)

**ದೂರದಲ್ಲಿ ಕುಳಿತುಕೊಳ್ಳದೇ ಸಂಪೂರ್ಣ ಸತ್ಯವನ್ನು ಆಕ್ಷೇಪಿಸುವುದು ಮೂರ್ಖತನವಲ್ಲದೇ ಮತ್ತೇನಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಇದು ಎಷ್ಟೊಂದು ಆಶ್ಚರ್ಯದ ಮಾತಾಗಿದೆ, ನನ್ನ ವಿರೋಧಿಗಳು ನನ್ನ ಮೇಲೆ ಮಾಡುವಂತಹ ಆರೋಪಗಳು ಅವರಿಗೆ ಇಸ್ಲಾಂ ಧರ್ಮದಿಂದಲೇ ವಿಮುಖರನ್ನಾಗಿ ಮಾಡುತ್ತವೆ. ಅವರ ಹೃದಯದಲ್ಲಿ ಭಯಭಕ್ತಿಯಿರುತ್ತಿದ್ದರೆ ಅವರು ಎಂದೂ ಇಂತಹ ಆರೋಪಗಳನ್ನು ಮಾಡುತ್ತಿರಲಿಲ್ಲ. ಅದರಲ್ಲಿ ಇತರ ಪ್ರವಾದಿಗಳು ಸಹ ಸೇರುತ್ತಾರೆ. ಇನ್ನೊಂದು ಆಶ್ಚರ್ಯದ ಮಾತೆಂದರೆ ಸಾವಿರಾರು ಭವಿಷ್ಯವಾಣಿಗಳಲ್ಲಿ ಅವು ಯಥಾಪ್ರಕಾರ ಸ್ಪಷ್ಟವಾಗಿ ಪೂರ್ಣಗೊಂಡಿವೆ ಅದರ ಮೇಲೆ ದೃಷ್ಟಿ ಹಾಯಿಸುವುದಿಲ್ಲ. ಎಲ್ಲೂ ಒಂದೆರಡು ಭವಿಷ್ಯವಾಣಿಗಳು ಅದು ಸಹ ಅವರ ಮೂರ್ಖತನದಿಂದ ತಿಳಿಯುವುದಿಲ್ಲ ಪದೇ ಪದೇ ಅವಸ್ಥೆ ಮುಂದು ಮಾಡುತ್ತಾರೆ ಇದು ನ್ಯಾಯವೇ? ಅವರು ಸತ್ಯವಂತರಾಗುತ್ತಿದ್ದರೆ ಅವರಿಗೆ ತೀರ್ಪು ಹೊಂದಲು ಸುಲಭ ಸಾಧ್ಯವಾಗಿತ್ತು. ಅವರು ಸ್ವಯಂ ಖಾದಿಯಾನಿಗೆ ಬರಬಹುದಾಗಿತ್ತು. ನಾನು ಅವರಿಗೆ ಬಂದು ಹೋಗುವ ಖರ್ಚು ಸಹ ಕೊಡುತ್ತಿದ್ದೆ ಮತ್ತು ಅವರಿಗೆ ಅತಿಥಿ ಸತ್ಕಾರ ನೀಡುತ್ತಿದ್ದೆ. ಆಗ ಅವರು ಮನವರಿಕೆ ಮಾಡಿಕೊಳ್ಳಬಹುದಾಗಿತ್ತು. ದೂರದಲ್ಲಿ ಕುಳಿತುಕೊಳ್ಳದೇ ಸಂಪೂರ್ಣ ಸತ್ಯವನ್ನು ಆಕ್ಷೇಪಿಸುವುದು ಮೂರ್ಖತನವಲ್ಲದೇ ಮತ್ತೇನಲ್ಲ ಅದೇ ತರಹದ ಮೂರ್ಖರು ಒಂದು ಸಂದರ್ಭದಲ್ಲಿ ಸುಮಾರು ಐದು ನೂರು ಸಮೀಪ ಜನರು ಮಸೀಹರಿಂದ ಧರ್ಮಭ್ರಷ್ಟರಾಗಿದ್ದರು. ಈ ವ್ಯಕ್ತಿಯು ಭವಿಷ್ಯವಾಣಿಗಳು ಪೂರ್ಣಗೊಂಡಿಲ್ಲ ವಾಸ್ತವದಲ್ಲಿ ಯಹೂದಾ ಸ್ಕ್ರಿಯೋತಿ

ಧರ್ಮಭ್ರಷ್ಟರಾಗಲು ಅದೊಂದು ಕಾರಣವಾಗಿತ್ತು. ಜಗಜ್ಜಾಹೀರವಾಗಿ ಯುದ್ಧಾಸ್ತ್ರಗಳನ್ನು ಸಹ ಖರೀದಿಸಿದ್ದರು. ಆದರೆ ಅದೆಲ್ಲ ವ್ಯರ್ಥವಾಯಿತು. ಮತ್ತು ದಾವೂದನ ಸಿಂಹಾಸನದ ಬಗ್ಗೆಯು ಭವಿಷ್ಯವಾಣಿ ಪೂರ್ತಿಯಾಗಲಿಲ್ಲ ಯಹೂದ ಬೇಸರಗೊಂಡು ಧರ್ಮಭ್ರಷ್ಟನಾದನು. ಮಸೀಹನಿಗೆ ಅವನು ಧರ್ಮಭ್ರಷ್ಟನಾಗುವನು ಎಂದು ಭಾವನೆ ಸಹ ಮೂಡಲಿಲ್ಲ. ವಿನಾಕಾರಣ ಅವನಿಗೆ ಸಹ ಸ್ವರ್ಗದ ಪಟ್ಟ ನೀಡುವ ವಾಗ್ದಾನ ಮಾಡಿದ್ದರು. ಅಂತೆಯೇ ಕೆಲ ವಿರೋಧಿಗಳು ಹುದ್ಯೆಬಿಯದ ಪ್ರವಾಸದ ಮೇಲೆ ಆಕ್ಷೇಪ ಮಾಡುತ್ತಾರೆ. ಈ ಭವಿಷ್ಯವಾಣಿ ಪೂರ್ಣಗೊಂಡಿಲ್ಲ ಎಂದು ಆ ದೀರ್ಘವಾದ ಪ್ರವಾಸ ಈ ಮಾತಿಗೆ ಸಾಕ್ಷಿಯಾಗಿತ್ತು. ಹಝ್ರತ್ ರಸೂಲುಲ್ಲಾಹ್(ಸ) ಭಾವಿಸುತ್ತಿದ್ದರು. ಅವರಿಗೆ ಕಅ್‌ಬದ ಪ್ರದಕ್ಷಿಣೆ ಮಾಡಲು ಅನುಮತಿ ದೊರೆಯಬಹುದೆಂದು. ಭವಿಷ್ಯವಾಣಿಯಂತೆ ಆ ಕೆಲ ನತದೃಷ್ಟರು ಧರ್ಮಭ್ರಷ್ಟರಾದರು. ಹಝ್ರತ್ ಉಮರ್(ರ) ಪರೀಕ್ಷೆಗೆ ಒಳಗಾದರು. ಅಂತಿಮವಾಗಿ ಆ ತಪ್ಪಿಗಾಗಿ ಪಶ್ಚಾತ್ತಾಪ ರೂಪದಲ್ಲಿ ಎಷ್ಟೋ ಸತ್ಕಾರ್ಯಗಳನ್ನು ಕೈಗೊಂಡರು. ಅವರ ನುಡಿಯಿಂದಲೇ ಅದು ಸ್ಪಷ್ಟವಿದೆ. ಈ ನಮೂನೆಗಳು ಆ ನತದೃಷ್ಟರ ಮುಂದಿವೆ. ಆದರೂ ಸಹ ಈ ಕಾಲದ ಮೂಢ ವಿರೋಧಿಗಳು ದೌರ್ಭಾಗ್ಯದೆಡೆಯೇ ವಾಲುತ್ತಾರೆ.

(ಅದೇ ಪುಟ 112).

### ನನ್ನ ವಿಷಯದಲ್ಲಿ ಸತ್ಯವನ್ನು ಸುಳ್ಳಾಗಿ ಪರಿವರ್ತಿಸುವ ಜನರಿಗೆ ಅಯ್ಯೋ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ ಪವಿತ್ರ ಖುರ್‌ಆನ್ ಹಝ್ರತ್ ಮಸೀಹರನ್ನು ಸತ್ಯವಂತರೆಂದು ಘೋಷಿಸಿದೆ. ಆದರೆ ವಿಷಾದಪೂರ್ವಕವಾಗಿ ಹೇಳಬೇಕಾಗುತ್ತದೆ. ಅವರ ಭವಿಷ್ಯವಾಣಿಗಳ ಮೇಲೆ ಯಹೂದ್ಯರು ಕಠಿಣವಾದ ಆರೋಪಗಳನ್ನು ಹೊರಿಸಿದ್ದಾರೆ. ಅದನ್ನು ನಾವು ಯಾವ ರೀತಿಯಲ್ಲೂ ದೂರ ಮಾಡಲು ಸಾಧ್ಯವಿಲ್ಲ ಕೇವಲ ಖುರ್‌ಆನ್‌ನ ಮೂಲಕ ನಾವು ನಂಬಿರುತ್ತೇವೆ ಮತ್ತು ಶುದ್ಧ ಮನಸ್ಸಿನಿಂದ ಸ್ವೀಕರಿಸುತ್ತೇವೆ. ಅವರ ಪ್ರವಾದಿತ್ವ ಹೊರತು ನಮ್ಮ ಬಳಿ ಯಾವ ಪುರಾವೆಯೂ ಇಲ್ಲ. ಕ್ರೈಸ್ತರಂತೂ ಅವರನ್ನು ದೇವರೆಂದು ಸಾರುತ್ತಾರೆ ಆದರೆ ಇಲ್ಲಿ ಪ್ರವಾದಿತ್ವ ಸಹ ಸಾಬೀತಾಗುವುದಿಲ್ಲ ಅಕಟಾಕಟ! ಯಾರ ಮುಂದೆ ದುಃಖ ತೋಡಿಕೊಳ್ಳಬೇಕು. ಹಝ್ರತ್ ಈಸಾ ನಬಿ ಅವರ ಮೂರು ಭವಿಷ್ಯವಾಣಿಗಳು ಸುಳ್ಳಾದವು. ಇಂದು ಆ ಸತ್ಯವನ್ನು ಬಯಲು ಮಾಡಲು ಭೂಮಿಯ ಮೇಲೆ ಯಾರಿದ್ದಾರೆ ಆ ಜನರ ಮೇಲೆ ತುಂಬಾ ವಿಷಾದವಿದೆ. ಅವರು ನನ್ನ ವಿಷಯದಲ್ಲಿ ಸತ್ಯವನ್ನು ಸುಳ್ಳಾಗಿ ಪರಿವರ್ತಿಸುತ್ತಿದ್ದಾರೆ.

(ಅದೇ ಪುಟ 121).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ವಾಸ್ತವವಾಗಿ ದಾವೂದನ ಸಿಂಹಾಸನ ಮತ್ತೆ ಸ್ಥಾಪನೆಯಾಗಬೇಕೆಂಬುದು ಯಹೂದ್ಯರ ಆಶಯವಾಗಿತ್ತು. ಪ್ರಾರಂಬದಲ್ಲಿ ಆ ಮಾತಿನಿಂದ ಸಂತೋಷಪಟ್ಟು ಹಲವು ಯಹೂದಿಗಳು ಅವರ ಬಳಿ ಒಟ್ಟುಗೂಡಿದ್ದರು. ಆದರೆ ನಂತರ ಬಂದ ಸಂದರ್ಭಗಳನ್ನು ನೋಡಿ ಯಹೂದಿಯರು ತಿಳಿದುಕೊಂಡರು. ಈ ವ್ಯಕ್ತಿ ಆ ಭಾಗ್ಯಕ್ಕೆ ಮತ್ತು ಆ ಮಟ್ಟಕ್ಕೆ ಯೋಗ್ಯವಲ್ಲ ಎಂದು. ಆದುದರಿಂದ ಅವರಿಂದ ಬೇರ್ಪಟ್ಟರು. ಮತ್ತು ಕೆಲ ದುಷ್ಟ ಜನರು ರೋಇನ ಸರಕಾರದವರೆಗೆ ಈ ಸುದ್ದಿ ತಲುಪಿಸಿದರು. ಈ ವ್ಯಕ್ತಿ ದಾವೂದನ ಸಿಂಹಾಸನದ ದಾವೆಯನ್ನು ಮಾಡುತ್ತಾನೆ. ಆಗ ಹಝ್ರತ್ ಮಸೀಹರು ತಕ್ಷಣ ಮಾತು ಬದಲಿಸಿದರು. ಮತ್ತು ಹೇಳಿದರು. ನನ್ನ ಸಿಂಹಾಸನ ದೈವಿಕ ಸಂಬಂಧದ್ದಾಗಿದೆ ಈ ನೆಲೆಯದ್ದಲ್ಲ. ಆದರೆ ಯಹೂದಿಗಳು ಇಲ್ಲಿಯವರೆಗೆ ಆರೋಪ ಮಾಡುತ್ತಾರೆ. ಅದು ದೈವಿಕ ಸಿಂಹಾಸನವಾಗಿದ್ದರೆ ಏಕೆ ಹವಾರಿಗಳಿಗೆ (ತಮ್ಮ ಶಿಷ್ಯಂದರಿಗೆ) ಈ ಆದೇಶ ನೀಡಿದ್ದರು. ಬಟ್ಟೆ ಬರೆ ಮಾರಿಯಾದರೂ ಆಯುಧಗಳನ್ನು ಖರೀದಿಸಿರಿ ಎಂದು. ಹಾಗೆ ಅದರಲ್ಲಿ ಯಾವ ಸಂಶಯವು ಉಳಿಯಲಿಲ್ಲ. ಹಝ್ರತ್ ಮಸೀಹರ ಹೇಳಿಕೆಯಲ್ಲಿ ತಪ್ಪು ಸಂಭವಿಸಿತು ಮತ್ತು ಅದು ಶೈತಾನನ ಊಹೆಯು ಆಗುವ ಸಾಧ್ಯತೆಯಿದೆ. ಅದಾದ ನಂತರ ಅವರು ರುಜು ವಾತುಪಡಿಸಿಕೊಂಡರು. ಏಕೆಂದರೆ ಪ್ರವಾದಿಗಳು ತಪ್ಪು ಹಾದಿ ತುಳಿಯುವುದಿಲ್ಲ. ಅದು ಶೈತಾನನ ಊಹೆಯಾಗಬಹುದು ಎಂಬ ಮಾತು ನಾನು ಇಂಜೀಲಿನ ಬರಹ ಮೂಲಕ ಹೇಳುತ್ತಿದ್ದೇನೆ. ಅದರಿಂದ ಸಾಬೀತಾಗುತ್ತದೆ. ಒಮ್ಮೊಮ್ಮೆ ಅವರಿಗೆ ಶೈತಾನನ ವಾಣಿಯು ದೊರೆಯುತ್ತಿತ್ತು ಎಂದು. ಆದರೆ ಆ ವಾಣಿಯನ್ನು ಅವರು ರದ್ದುಗೊಳಿಸುತ್ತಿದ್ದರು. ಅಲ್ಲಾಹನು ಶೈತಾನನ ಪ್ರಭಾವದಿಂದ ಅವರನ್ನು ರಕ್ಷಿಸುತ್ತಿದ್ದನು. ಇಸ್ಲಾಮಿ ಹದೀಸುಗಳಲ್ಲಿ ಅವರ ಈ ಗುಣಗಳನ್ನು ಬರೆಯಲಾಗಿದೆ. ಅವರು ಅದರಿಂದ ಸದಾಕಾಲಕ್ಕೂ ರಕ್ಷಿಸಲ್ಪಟ್ಟರು ಎಂದು. ಅವರು ಶೈತಾನನನ್ನು ಅನುಸರಿಸಲಿಲ್ಲ.

ಒಬ್ಬ ದುಷ್ಟ ಯಹೂದಿ ತನ್ನ ಪುಸ್ತಕದಲ್ಲಿ ಬರೆಯುತ್ತಾನೆ. ಒಂದು ಸಂದರ್ಭದಲ್ಲಿ ಅವರು ಓರ್ವ ಪರಸ್ತ್ರೀಯ ಮೇಲೆ ಪ್ರೇಮಕ್ಕೆ ಒಳಗಾಗಿದ್ದರು. ಆದರೆ ಶತ್ರುವಿನ ಬಾಯಿಯಿಂದ ಹೊರಟ ಮಾತುಗಳು ನಂಬಲು ಅರ್ಹವಾಗಿರುವುದಿಲ್ಲ.

ಅವರು ಅಲ್ಲಾಹನ ಪ್ರಿಯ ಮತ್ತು ಪ್ರಸಿದ್ಧ ದಾಸರಾಗಿದ್ದರು. ಅವರ ಮೇಲೆ ಆರೋಪ ಹೊರಿಸುವವರು ದುಷ್ಟರಾಗಿದ್ದಾರೆ. ಹೌದು ಅವರು ತಪ್ಪು ಗ್ರಹಿಕೆಯಿಂದಾಗಿ ದಾವೂದನ ಸಿಂಹಾಸನದ ಆಶೆ ಹೊಂದಿದ್ದರು. ಆದರೆ ಆ ಆಶೆ ಈಡೇರಲಿಲ್ಲ. ಬೇಡದೆ ಮುತ್ತು ಲಭಿಸಿದವು. ಆದರೆ ಬೇಡಿದರೆ ಭಿಕ್ಷೆಯೂ ದೊರೆಯಲಿಲ್ಲ ಎಂಬ ಗಾದೆ ಮಾತಿನ ಅವಸ್ಥೆ ಆಗಿದೆ ಅವರದ್ದು. ಅವರು ದಾವೂದನ ಸಿಂಹಾಸನದಿಂದ ವಂಚಿತರಾದರು. ಆದರೆ ಆ ಪರಿಶುದ್ಧ ಪ್ರವಾದಿ, ಪ್ರವಾದಿಗಳ ನಾಯಕರು, ಅವರು ಲೌಕಿಕ ಸಿಂಹಾಸನಕ್ಕೆ ಆಸೆಪಡದೇ ಹೀಗೆ ಹೇಳಿದರು. **"ಅಲ್‌ಫಖ್‌ರು ಫಖರಿ"** ಅಂದರೆ ಬಡತನದ ಮೇಲೆ ನನಗೆ ಗೌರವವಿದೆ. ಅವರಿಗೆ ಅಲ್ಲಾಹನು ಸಿಂಹಾಸನವನ್ನು ನೀಡಿದನು. ಅವರು ಹೇಳಿದರು. ನಾನು ಒಂದು ದಿನ ಹಸಿವಿನಿಂದ ಬಯಸುತ್ತೇನೆ. ಮತ್ತು ಒಂದು ರೊಟ್ಟಿ ತಿನ್ನ ಬಯಸುತ್ತೇನೆ. ಆದರೆ ಅಲ್ಲಾಹನು ಅವರನ್ನು ಹಸಿವೆಯಿಂದ ರಕ್ಷಿಸಿದನು. ಇದು ಅಲ್ಲಾಹನ ವಿಶೇಷ ರೀತಿಯ ಅನುಗ್ರಹವಾಗಿದೆ. (ಅದೇ ಪುಟ 133).

ಮುಂದಿನ ಸಂಚಿಕೆಯಲ್ಲಿ ನಾವು ಇನ್‌ಶಾಅಲ್ಲಾಹ್, ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಹ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ವಾರ್ಷಿಕ ಇಜ್ತೆಮಾ ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 21, 22 ಮತ್ತು 23ನೇ ಅಕ್ಟೋಬರ್ 2022 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 08 September 2022, Issue No. 36

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಐರ್ಲ್ಯಾಂಡ್ನ ಪ್ರವಾಸ (ಸೆಪ್ಟೆಂಬರ್ 2014)

(ಬದರ್ ಸಂಚಿಕೆ 35ರ ಉಳಿದ ಭಾಗ)

ಐರ್‌ಲ್ಯಾಂಡ್ ದೇಶವು ಯೂರೋಪ್ ಖಂಡದ ದೂರದ ವಾಯುವ್ಯದಲ್ಲಿರುವ ಪೆಸಿಫಿಕ್ ಸಾಗರದಲ್ಲಿರುವ ಒಂದು ದ್ವೀಪವಾಗಿದೆ. 70,273 ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿ ಹರಡಿರುವ ದೇಶವು ನಾಲ್ಕು ಪ್ರಾಂತ್ಯಗಳು ಮತ್ತು ಇಪ್ಪತ್ತಾರು ಕೌಂಟಿಗಳನ್ನು ಒಳಗೊಂಡಿದೆ. ಅದು 45 ಲಕ್ಷ ಮತ್ತು ಇಪ್ಪತ್ತಾರು ಕೌಂಟಿಗಳನ್ನು ಒಳಗೊಂಡಿದೆ. ಅದು 45 ಲಕ್ಷ ಜನಸಂಖ್ಯೆಯನ್ನು ಹೊಂದಿದೆ.

ಇಲ್ಲಿ Roman catholic ಧರ್ಮದಿಂದ ಸಂಬಂಧ ಹೊಂದಿದ ಜನರು ಬಹುಸಂಖ್ಯೆಯಲ್ಲಿದ್ದಾರೆ. ಉಳಿದ 5 Percentage ವಿವಿಧ ಧರ್ಮದವರಿದ್ದಾರೆ ಮತ್ತು ಸಮುದಾಯಗಳಿಗೆ ಸಂಬಂಧಿಸಿದೆ.

ಬ್ರಿಟಿಷರು 12ನೇ ಶತಮಾನದಲ್ಲಿ ಐರ್‌ಲ್ಯಾಂಡ್ ಮೇಲೆ ತನ್ನ ಪ್ರಭುತ್ವ ಸಾಧಿಸಿದ್ದರು. ಕೊನೆಗೆ ಒಂದು ದೀರ್ಘ ಹೋರಾಟದ ನಂತರ 1921 ರಲ್ಲಿ ಐರ್‌ಲ್ಯಾಂಡ್ ಬ್ರಿಟಿಷರಿಂದ ಸ್ವತಂತ್ರಗೊಂಡಿತು. ಆದರೆ ದ್ವೀಪದ 1/6 ಭಾಗ ಇನ್ನು ಸಹ ಬ್ರಿಟಿಷರ ಪ್ರಭಾವ ಹೊಂದಿದೆ. ಅದನ್ನು ಉತ್ತರ ಐರ್‌ಲ್ಯಾಂಡ್ ಎನ್ನಲಾಗುತ್ತದೆ. ಇಲ್ಲಿಯ ರಾಜಧಾನಿ Belfast ಆಗಿದೆ.

ಐರ್‌ಲ್ಯಾಂಡ್ ದೇಶವು ವಿಶಾಲವಾದ ಹಚ್ಚು ಹಸಿರು ಪರ್ವತ ಮನಸೆಳೆಯುವಂತಹ ಜಲಪಾತ ಝರಿಗಳು ಮತ್ತು ಲೋಕದ ಸುಂದರ ಕಡಲಗಳಿಂದಾಗಿ ಪ್ರವಾಸಿಗರಿಗಾಗಿ ಹೆಸರುವಾಸಿಯಾಗಿದೆ.

ಇಲ್ಲಿ ಹರಿಯುವ ನದಿಗಳಲ್ಲಿ Shannon ಎಲ್ಲರಿಗಿಂತ ಉದ್ದವಾದ ನದಿಯಾಗಿದೆ. ಅದರ ಉದ್ದಳತೆ 370 ಕಿ.ಮೀ ಆಗಿದೆ. ಅದು ಉತ್ತರ ಪಶ್ಚಿಮ ಭಾಗದಿಂದ ಉದ್ಭವವಾಗುತ್ತದೆ ಮತ್ತು ದಕ್ಷಿಣ ಪಶ್ಚಿಮ ಭಾಗದೆಡೆಯಿಂದ ಹರಿಯುತ್ತ ಪೆಸಿಫಿಕ್ ಸಮುದ್ರದಲ್ಲಿ ಸೇರಿಕೊಳ್ಳುತ್ತದೆ. ಅದಾಗ್ಯೂ ಬೇರೆ ನದಿ Wicklow Liffay ನ ಪರ್ವತಗಳಿಂದ ಹಾದು ಹೋಗುತ್ತ ಉತ್ತರ ಪಶ್ಚಿಮದಿಂದ 121 ಕಿ.ಮೀ ದೂರ ಕ್ರಮಿಸುತ್ತ ದಬ್ಲಿನ್ ನಗರದ ಮಧ್ಯದಿಂದ ಹಾದು ಐರಿಶ್ ಸಮುದ್ರ ಸೇರುತ್ತದೆ.

ಐರ್‌ಲ್ಯಾಂಡ್‌ನಲ್ಲಿ ಜಮಾಅತಿನ ಸ್ಥಾಪನೆ ಮತ್ತು ಮಿಷನ್ ಹೌಸ್ ಸ್ಥಾಪನೆಗಿಂತ ಮೊದಲು ಕೆಲ ಪಾಕಿಸ್ತಾನಿ ಅಹ್ಮದಿ ಬಾಂಧವರು ಇಲ್ಲಿ ವಾಸ ಮಾಡತೊಡಗಿದರು. ಎಲ್ಲರಿಗಿಂತ ಮೊದಲು ಮುಕರ್ರಮ್ ಮುಹಮ್ಮದ್ ಹನೀಫ್ ಸಾಹಿಬ್ ಇಬ್ನು ಮು. ಮುಹಮ್ಮದ್ ಶರೀಫ್ ಸಾಹಿಬ್ ಸರ್‌ಹಿಂದಿ 1976 ರಲ್ಲಿ ಕೆಲಸನವನ್ನು ಹುಡುಕುತ್ತ ಇಲ್ಲಿ ಬಂದರು ಮತ್ತು gateway ನಗರದಲ್ಲಿ ವಾಸಿಸಿದರು. ಅನಂತರ ಸಮಯ ಸಮಯಕ್ಕೆ ಇನ್ನಷ್ಟು ಅಹ್ಮದಿ ಬಾಂಧವರು ಐರ್‌ಲ್ಯಾಂಡ್ ಆಗಮಿಸಿದರು. ಮತ್ತು ವಿವಿಧ ನಗರಗಳಲ್ಲಿ ವಾಸಿಸತೊಡಗಿದರು.

ಮಿಷನ್ ಹೌಸನ್ನು ಕಾಣಲು ಮೊದಲು ಬಂದ ತಂಡ ಮುಕರ್ರಮ್ ನಸೀಮ್ ಅಹ್ಮದ್ ಬಾಜ್ವಾ ಸಾಹಿಬ್ ಮುಬಲ್ಲಿಗ್ ಯು.ಕೆ ಮತ್ತು ಮುಕರ್ರಮ್ ಹಿದಾಯತುಲ್ಲಾ ಬಂಗ್ವಿ ಸಾಹಿಬ್ ದಿವಂಗತರು (ಮುಖ್ಯ ಕಾರ್ಯದರ್ಶಿ. ಯು.ಕೆ) ಅವರುಗಳ ಮೇಲೆ ಒಳಗೊಂಡಿತ್ತು. ಆಗಸ್ಟ್ 1983 ರಲ್ಲಿ ಐರ್‌ಲ್ಯಾಂಡ್ ಕಳುಹಿಸಲಾಯಿತು. ಈ ತಂಡವು ದುಬ್ಲಿನ್ ಮತ್ತು ಗಾಲ್ವೆ ಎರಡೂ ನಗರಗಳ ಪ್ರವಾಸ ಮಾಡಿದರು ಮತ್ತು ಮಿಷನ್ ಹೌಸನ್ನು ಪರಿಶೀಲಿಸಿದರು.

ಇಲ್ಲಿ ಮಿಷನ್ ಹೌಸ್ ಸ್ಥಾಪಿಸಲು ಪ್ರಯತ್ನಗಳು ಜಾರಿಯಲ್ಲಿವೆ. ಮು. ಕಲೀಮ್ ಅಹ್ಮದ್ ಸಾಹಿಬ್ ಮತ್ತು ಅವರ ಮಗ ನದೀಮ್ ಅಹ್ಮದ್ ಸಾಹಿಬ್ ಒಳಗೊಂಡ ವಾಖಿಫೀನ್ ಆರ್ಝಿಯ ಮೊದಲ ತಂಡ 12 ಆಗಸ್ಟ್ 1985 ಕ್ಕೆ ಲಂಡನ್ನಿನಿಂದ ಐರ್‌ಲ್ಯಾಂಡ್ ಪ್ರವಾಸ ಹೊರಟರು. ಆತಂಡವು ಡಬ್ಲಿನ್ ಮತ್ತು ಗಾಲ್ವೆ ನಗರದ ವಿಶ್ವವಿದ್ಯಾಲಯಗಳ ಹಾಗೂ ಮಹಾವಿದ್ಯಾಲಯಗಳ ಪ್ರವಾಸ ಮಾಡಿದರು. ಶೈಕ್ಷಣಿಕ ಕ್ಷೇತ್ರಗಳೊಂದಿಗೆ ಸಂಪರ್ಕ ಮಾಡಿ ಜಮಾಅತಿನ ಪರಿಚಯ ಮಾಡಿಸಿಕೊಟ್ಟರು. ಪತ್ರಿಕೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಭೇಟಿಯಾದರು. ಅದರ ಪರಿಣಾಮವಾಗಿ ಹಲವು ಪತ್ರಿಕೆಗಳು ಅವರ ಸಂದರ್ಶನದ ಪ್ರಕಟಪಡಿಸಿದರು.

ಮುಕರ್ರಮ್ ರಶೀದ್ ಅಹ್ಮದ್ ರಾಶಿದ್ ತೌಹಿಬ್ ಮೊದಲ ಮುಬ್ಬಲಿಗ್ವ್‌ರಾಗಿ 15 ಆಗಸ್ಟ್ 1988 ರಂದು ಲಂಡನ್ನಿಂದ ಐರ್‌ಲ್ಯಾಂಡ್ ತಲುಪಿದರು ಮತ್ತು ಪ್ರಾರಂಭದಲ್ಲಿ ಮುಹಮ್ಮದ್ ಹನೀಫ್ ಸಾಹಿಬ್ ಐರ್‌ಲ್ಯಾಂಡ್ ಜಮಾಅತಿನ ಅಧ್ಯಕ್ಷರ ಬಳಿ ವಾಸ ಮಾಡಿ ಜುಮುಅ ನಮಾಝ್ ಹಾಗೂ ಇತರ ನಮಾಝುಗಳ ಜಮಾಅತಾಗಿ ವ್ಯವಸ್ಥೆ ಮಾಡಿಕೊಟ್ಟರು. ಕೇಂದ್ರದ ನಿರ್ದೇಶನಗಳ ಮೇರೆಗೆ ಮಿಷನ್ ಹೌಸ್‌ಗೋಸ್ಕರ ಪ್ರಯತ್ನ ನಡೆಸಿದರು. ಹಾಗೆ ಗಾಲ್ವೆನಲ್ಲಿ ಒಂದು ಕಟ್ಟಡ 32 ಸಾವಿರ ಪೌಂಡ್‌ನಲ್ಲಿ ಖರೀದಿಸಿದರು. 26 ಜನವರಿ 1989 ರಂದು ಸಂಘಟನಾ ಮುಬಲ್ಲಿಗರು ಮಿಷನ್ ಹೌಸಿಗೆ ಸ್ಥಳಾಂತರ ಮಾಡಿದರು.

ಹಝ್ರತ್ ಖಲೀಫತುಲ್ ಮಸೀಹ್ ಚತುರ್ಥರು 29 ರಿಂದ 31 ಮಾರ್ಚ್ 1989 ರಂದು ಐರ್‌ಲ್ಯಾಂಡ್‌ನ ಪ್ರವಾಸ ಮಾಡಿದ್ದರು. 31 ಮಾರ್ಚ್‌ರಂದು ಹುಝೂರ್ ಜುಮುಅ ನಮಾಝ್ ಮಿಷನ್ ಹೌಸಿನಲ್ಲಿ ನಿರ್ವಹಿಸಿಕೊಟ್ಟರು ಮತ್ತು ವಿಧಿಬದ್ಧವಾಗಿ ಮಿಷನ್ ಹೌಸ್‌ನ ಉದ್ಘಾಟನೆಯ ಘೋಷಣೆ ಮಾಡಿದರು. ಆ ಜುಮುಅ ನಮಾಝಿನಲ್ಲಿ ಒಟ್ಟು 29 ಜನರು ಭಾಗವಹಿಸಿದ್ದರು. ಅದರಲ್ಲಿ ಐರ್‌ಲ್ಯಾಂಡ್ ಜಮಾಅತಿನ ಜನರ ಸಂಖ್ಯೆ 13 ಆಗಿತ್ತು. ಅದೇ ದಿನ ಸಂಜೆ Great southen ಹೋಟೇಲ್‌ನಲ್ಲಿ ಒಂದು ಸಂಜೆಯ ಔತಣ ಕೂಟದ ವ್ಯವಸ್ಥೆ ಮಾಡಲಾಯಿತು. ಅದರಲ್ಲಿ ಗಾಲ್ವೆಯ ಮೇಯರ್ ಅಲ್ಲದೇ 48 ಅತಿಥಿಗಳು ಭಾಗವಹಿಸಿದ್ದರು. ಕೆಲ ಪತ್ರಿಕೆ ಮಾಧ್ಯಮಗಳು ಹುಝೂರ್‌ರ ಸಂದರ್ಶನ ಪಡೆದರು. ಅದನ್ನು ನಂತರ ಬಿತ್ತರಿಸಿದರು.

**************

ಐರ್‌ಲ್ಯಾಂಡ್‌ನಲ್ಲಿ ಜಮಾಅತಿನ ಮಿಷನ್ ಹೌಸ್ ವಿಧಿಬದ್ಧವಾಗಿ ಸ್ಥಾಪಿಸಿದ ನಂತರ ಆ ಸಮಯ ಜಮಾಅತಿನ ಜನರ ಒಟ್ಟು ಸಂಖ್ಯೆ ಕೇವಲ 16 ಆಗಿತ್ತು. ಇದೀಗ ಅಲ್ಲಾಹನ ಅನುಗ್ರಹದಿಂದ ಐರ್‌ಲ್ಯಾಂಡ್ ಜಮಾಅತಿನ ಜನರ ಸಂಖ್ಯೆ 354 ಆಗಿದೆ. ದೇಶದ ನಗರಗಳಾದ Limerick, Dubline, cork Drogheda, Athlone, Gateway & Pomtiose ನಲ್ಲಿ ಜಮಾಅತ್ ಬಾಂಧವರು ವಾಸಿಸುತ್ತಿದ್ದಾರೆ. ಇಲ್ಲಿಯ ಜಮಾಅತ್ ತುಂಬಾ ಸುವ್ಯವಸ್ಥಿತವಾಗಿದೆ. ದೃಢ ಮತ್ತು ಸಕ್ರಿಯವಾಗಿದೆ ಮತ್ತು ಸಾಂಪತ್ತಿಕ ತ್ಯಾಗದಲ್ಲಿ ಮುನ್ನಡೆ ಸಾಧಿಸಿದವರಾಗಿದ್ದಾರೆ. ಜಮಾಅತ್ 2010 ನೇ ವರ್ಷದಲ್ಲಿ ಡಬ್ಲಿನ್ ನಗರದಲ್ಲಿ ಎರಡೂ ಲಕ್ಷ ಎಂಭತ್ತು ಸಾವಿರ ಯೂರೋ ಮೊತ್ತದಿಂದ ಒಂದು ಕಟ್ಟಡ ಮಿಷನ್ ಹೌಸಿಗಾಗಿ ಖರೀದಿಸಿದರು. ಈ ಕಟ್ಟಡದ ಕೆಲಭಾಗ ನಮಾಝಿನ ಸಲುವಾಗಿ ಬಳಸಲಾಗುತ್ತದೆ. ಮತ್ತು ಅದರೊಂದಿಗೆ ಸೇರಿದ ಮನೆ ಬಾಡಿಗೆಯ ಮೇಲೆ ಪಡೆಯಲಾಗಿದೆ. ಅದು ಲಜ್ನ ಅವರ ನಮಾಝಿಗೋಸ್ಕರ ಮತ್ತು ಕುಸರಿ ಕೆಲಸಗಳಿಗೆ ಬಳಸಲಾಗುತ್ತದೆ.

ಹುಝೂರ್ ಅನ್ವರ್ (ಅಬಿಅ) ತಮ್ಮ ಹಿಂದಿನ ಪ್ರವಾಸದ ನಡುವೆ ಈ ಜಮಾಅತಿ ಈ ಸೆಂಟರಿನ ಹೆಸರು "ಬೈತುಲ್ ಅಹ್ಮದ್" ಎಂದು ಇಟ್ಟಿದ್ದರು.

ಇದೀಗ ಜಮಾಅತ್ ಐರ್‌ಲ್ಯಾಂಡ್ ಇನ್ನಷ್ಟು ಸಾಂಪತ್ತಿಕ ತ್ಯಾಗ ಪ್ರದರ್ಶಿಸುತ್ತ ಗಾಲ್ವೆಯಲ್ಲಿ ಜಮಾಅತಿನ ಪ್ರಥಮ ಮಸೀದಿ "ಮಸ್ಜಿದ್ ಮರ್‌ಯಮ್" ನಿರ್ಮಿಸುವ ಭಾಗ್ಯ ಪಡೆದಿದೆ. ಅಲ್ಹಮ್ದುಲಿಲ್ಲಾಹ್.

**(ಮುಂದುವರಿಯುವುದು)**

**ವಿಶೇಶ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ. ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

**NATIONAL TOLL FREE : 1800-103-2131**

ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ

(ಶುಕ್ರವಾರ ರಜೆ)

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.